# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 Volume:02 • ಸಂಚಿಕೆ: 52 Issue: 52 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 20.08.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2




HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here
reach more readers
Why Choose Us?
No.1 ನಿಮ್ಮ ದಿನಪತ್ರಿಕೆ
- Experienced Professionals
- Fast and Reliable Service
- Customized Solutions
- Competitive Pricing
E-mail: hampitimes@gmail.com
www.hampitimes.com
epaper.hampitimes.com
9448633038


# ಸರ್ಕಾರ ಉರುಳಿಸುವ ಹಗಲುಗನಸು ಕಾಣ್ತಿದೆ ಬಿಜೆಪಿ ಆಡಳಿತ ಅಸ್ಥಿರಗೊಳಿಸಲು ಮುಂದುವರೆಸಿದ ಷಡ್ಯಂತ್ರ

## ಸಂಸದ ಇ.ತುಕಾರಾಂ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್ ಹೇಳಿಕೆ। ಕುತಂತ್ರ ನಿಲ್ಲಿಸದಿದ್ರೆ ಬಂದ್‌ಗೆ ಕರೆ

**ಹಂಪಿ ಟೈಮ್ಸ್ ಹೊಸಪೇಟೆ:**
ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮವನ್ನು ಖಂಡಿಸಿ ನಗರದಲ್ಲಿ ಕಾಂಗ್ರೆಸ್ ಜಿಲ್ಲಾ ಘಟಕದಿಂದ ಸೋಮವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ನಗರದ ಮಹಾತ್ಮ ಗಾಂಧಿ ವೃತ್ತದಿಂದ ಆರಂಭಗೊಂಡ ಪ್ರತಿಭಟನೆ ಮೂರಂಗಡಿ ಸರ್ಕಲ್, ಬಸ್ ನಿಲ್ದಾಣ, ಡಾ.ಪುನೀತ್ ರಾಜ್‌ಕುಮಾರ್ ಸರ್ಕಲ್ ಮಾರ್ಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಕೇಂದ್ರದ ಸರ್ಕಾರ ಹಾಗೂ ಬಿಜೆಪಿ ವಿರುದ್ಧ ಪ್ರತಿಭಟಿಸಿ, ಧಿಕ್ಕಾರ ಕೂಗಿಸಿದರು. ಸಂಸದ ಇ.ತುಕಾರಾಂ ಮಾತನಾಡಿ, 20 ವರ್ಷಗಳ ಹಿಂದಿನ ವಿಚಾರವನ್ನು ಮುನ್ನೆಲೆಗೆ ತಂದು ಜನರಲ್ಲಿ ಇಲ್ಲದ ಗೊಂದಲ ಸೃಷ್ಟಿಸುತ್ತಿದೆ. ಮುಡಾ ನಿವೇಶನ ಪ್ರಕರಣಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನೇರವಾಗಿ ಸಂಬಂಧವಿಲ್ಲ. ಆದರೂ, ವಿನಾಕರಣ ಸಿದ್ದರಾಮಯ್ಯ ಮೇಲೆ ಗೂಭೆ ಕೂರಿಸಲಾಗುತ್ತಿದೆ. ಈ ಮೂಲಕ 136 ಸ್ಥಾನಗಳನ್ನು ಗೆದ್ದು, ರಾಜ್ಯದಲ್ಲಿ ಅಧಿಕಾರ ಸ್ಥಾಪಿಸಿರುವ ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವ ಹಗಲು ಕನಸು ಕಾಣುತ್ತಿದೆ. ಅದಕ್ಕಾಗಿ ಬಿಜೆಪಿ ನಾಯಕರು ರಾಜಭವನ್ನು ದುರುಪಯೋಗ ಪಡೆಸಿಕೊಳ್ಳುತ್ತಿದ್ದಾರೆ. ಇದರ ವಿರುದ್ಧ ಪಕ್ಷದ ಹೋರಾಟ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳಲಿದೆ ಎಂದು ತಿಳಿಸಿದರು.



ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸಿರಾಜ್ ಶೇಖ್ ಮಾತನಾಡಿ, ಚುನಾಯಿತ ಸರ್ಕಾರಗಳನ್ನು ಅಸ್ಥಿರಗೊಳಿಸುವ ಷಡ್ಯಂತ್ರವನ್ನು ಕರ್ನಾಟಕದಲ್ಲಿ ಮುಂದುವರಿಸಿದೆ. ಈ ಕೂಡಲೇ ಬಿಜೆಪಿ ತನ್ನ ಕುತಂತ್ರವನ್ನು ನಿಲ್ಲಿಸಬೇಕು. ಇಲ್ಲವೇ, ಹೊಸಪೇಟೆ ಹಾಗೂ ವಿಜಯನಗರ ಜಿಲ್ಲಾ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಳಿಕ ಈ ಕುರಿತು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು. ಜಿಲ್ಲಾ ಉಪಾಧ್ಯಕ್ಷ ಕೆ.ಎಂ.ಹಾಲಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಬಗಲ್ ರಾಮಕೃಷ್ಣ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಣಿ ಸಂಯುಕ್ತ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಇಮಾಮ್ ನಿಯಾಜಿ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ವಿನಾಯಕ ಶೆಟ್ಟರ್,ಸಿ. ಖಾಜಾ ಹುಸೇನ್, ಅವಾಳಗಿ ಕೊಟ್ರೇಶ್, ಕ್ವಾವ್ಲಿ ಹನುಮಂತಪ್ಪ, ವಿ.ಅಂಜಿನಪ್ಪ, ಕುಬೇರಪ್ಪ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ ಯಾದವ್, ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಕುರಿ ಶಿವಮೂರ್ತಿ, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ತಮ್ಮನ್ನಳಪ್ಪ, ಮುಖಂಡರಾದ ಕವಿತಾ ಈಶ್ವರ ಸಿಂಗ್, ಸೇರಿದಂತೆ ಅನೇಕ ಕಾರ್ಯಕರ್ತರು ಇತರರು ಇದ್ದರು.

## ಮೈಕ್ರೋ ನ್ಯೂಸ್

### ಐಟಿಐ ಅಪ್ರೆಂಟಿಸ್‌ಶಿಪ್ ಮೇಳ ಆಗಸ್ಟ್ 21ರಂದು

**ಹಂಪಿ ಟೈಮ್ಸ್ ಹೂವಿನ ಹಡಗಲಿ:**
ಇಲ್ಲಿನ ಸರಕಾರಿ ಕೈಗಾರಿಕ ತರಬೇತಿ ಸಂಸ್ಥೆಯಲ್ಲಿ ಆ.21ರಂದು ಬೆಳಗ್ಗೆ 9 ಗಂಟೆಯಿಂದ ಜಿಲ್ಲಾ ಅಪ್ರೆಂಟಿಸ್‌ಶಿಪ್ ಮೇಳ ಆಯೋಜಿಸಲಾಗಿದೆ. ಜಿಲ್ಲೆಯ ಎಲ್ಲಾ ಉದ್ದಿಮೆದಾರರು ಮತ್ತು ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರು ತಮ್ಮ ಸಿಬ್ಬಂದಿಗಳೊಂದಿಗೆ undefined ಭಾಗವಹಿಸಬೇಕು ಹಾಗೂ ಶಿಶಿಕ್ಷು ತರಬೇತಿ ನೊಂದಣಿಗಾಗಿ ಐ.ಟಿ.ಐ ಪಾಸಾದ ಆಸಕ್ತ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬೇಕು ಎಂದು ಹೂವಿನಹಡಗಲಿಯ ಸರಕಾರಿ ಕೈಗಾರಿಕ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

### ಗುತ್ತಿಗೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮೀನುಗಾರಿಗೆ ಇಲಾಖೆಯ ಜಲಸಂಪನ್ಮೂಲಗಳಾದ ಸುಂಕಲತಾಯಮ್ಮ ಕೆರೆಯ ಮೀನು ಪಾಶುವಾರು ಹಕ್ಕನ್ನು 5 ವರ್ಷಕ್ಕೆ ನೇರಗುತ್ತಿಗೆ ಮೂಲಕ ವಿಲೇವಾರಿ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು ಆಗಸ್ಟ್ 23 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ಮೀನು ರೈತ ಉತ್ಪಾದಕರ ಸಂಸ್ಥೆಗಳಿಂದ (ಎಫ್‌ಪಿಒ) ಅರ್ಜಿ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

# ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಾಲ ಸೌಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಅರಿವು (ರಿನ್ಯೂವಲ್) ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಮತಿಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನರು, ಭೌದ್ದರು, ಸಿಖ್ಖರು, ಪಾರ್ಸಿ ಜನಾಂಗದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನಾಂಕ ಆಗಿರುತ್ತದೆ.

ಈ ಹಿಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್, ಡಿ–ಸಿಇಟಿ, ಪಿಜಿ–ಸಿಇಟಿ ನಲ್ಲಿ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್ಗಳಲ್ಲಿ ಆಯ್ಕೆಯಾಗಿರುವಂತಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ನೀಡಲಾಗುವುದು. ಸಾಲ ಪಡೆಯಲು ಅಪೇಕ್ಷಿಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ನಿಗಮದಿಂದ ಈ ಹಿಂದಿನ ವರ್ಷದಲ್ಲಿ ಪಡೆದಿರುವ ಒಟ್ಟು ಸಾಲದ ಬಾಕಿಯ >>4

# ಜ್ಞಾನ ಸಂಪತ್ತಿಗಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸಿ

## ಶ್ರೀ ಸಿದ್ದರಾಮಾನಂದಪುರಿ ಸ್ವಾಮಿ ಹೇಳಿಕೆ। ಬೀರೇಶ್ವರ ಸ್ವಾಮಿ ದೇಗುಲ ಉದ್ಘಾಟನೆ

**ಹಂಪಿ ಟೈಮ್ಸ್ ಕೊಟ್ಟೂರು**
ಕನ್ಯಾಕುಮಾರಿ ಯಿಂದ ಕಾಶ್ಮೀರದ ತನಕ ಪ್ರತಿ ಹಳ್ಳಿಯಲ್ಲಿ ಬೀರಪ್ಪನ ಗುಡಿಗಳಿದ್ದು, ಸುಮಾರು 3 ಸಾವಿರ ವರ್ಷದ ಇತಿಹಾಸ ಇರುವ ಪ್ರಾಚೀನ ಪರಂಪರೆ ಹಾಲುಮತ ಸಮಾಜದ್ದು ಎಂದು ಕನಕಗುರು ಪೀಠದ ಶಾಖಾ ಮಠ ತಿಂಥಿಣಿ ಬ್ರಿಡ್ಜ್ನ ಶ್ರೀ ಸಿದ್ದರಾಮಾನಂದಪುರಿ ಸ್ವಾಮಿ ಹೇಳಿದರು.

ಕೊಟ್ಟೂರು ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬೀರೇಶ್ವರ ಸ್ವಾಮಿ ದೇವಾಲಯ ಉದ್ಘಾಟನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಭಾನುವಾರ ನೆರವೇರಿಸಿ ಆಶೀರ್ವಚನ ನೀಡಿದರು.



ನಮ್ಮದು ವಿಶೇಷ ಪರಂಪರೆ, ಹಾಲಮತ ಧರ್ಮದಲ್ಲಿ ನೇರ ಪೂಜೆ ಸಂಪ್ರದಾಯವಿದೆ. ದೇವರು ಮತ್ತು ಭಕ್ತರ ನಡುವೆ ಬೇರೊಬ್ಬ ಇಲ್ಲ. ಬಹಳ ಸಂಪ್ರದಾಯವಾಗಿ 35 ಲಕ್ಷ ರೂ. ವೆಚ್ಚದಲ್ಲಿ ಈ ನೂತನ ಬೀರೇಶ್ವರ ಸ್ವಾಮಿ ದೇವಾಲಯ ನಿರ್ಮಿಸಿದ್ದಾರೆ ಎಂದರು.

ಬೀರಪ್ಪ ದೇವರ ಭಕ್ತರು ಕಡ್ಡಾಯವಾಗಿ ಭಾನುವಾರ ಮಾಂಸಹಾರವನ್ನು ಮತ್ತು ಮದ್ಯಪಾನವನ್ನು ತ್ಯೆಜಿಸಬೇಕು. ಇಂದು ಹಾಲಮತಸ್ಥರ ಮನೆತನಗಳು ಮೂಲ ಸಂಪ್ರದಾಯ ಮರೆತ್ತಿದ್ದಾರೆ. ಬೀರಪ್ಪನ್ನ ಮನೆತನದಲ್ಲಿ ಪ್ರತಿಯೊಬ್ಬರು ದುಡಿಯಬೇಕು ಎಂದರು. >>4

# ಪಟ್ಟಣದ ಸೌಂದರ್ಯ ಹೆಚ್ಚಳಕ್ಕೆ ಆದ್ಯತೆ

## ಕಾವಲ್ಲಿ ಶಿವಪ್ಪ ನಾಯಕ, ಲೀಲಾವತಿ ಪ್ರಭಾಕರ್ ಅವಿರೋಧವಾಗಿ ಆಯ್ಕೆ



**ಹಂಪಿ ಟೈಮ್ಸ್ ಕೂಡ್ಲಿಗಿ**
ಸ್ಥಳೀಯ ಪಪಂ ಅಧ್ಯಕ್ಷರಾಗಿ ಕಾವಲ್ಲಿ ಶಿವಪ್ಪ ನಾಯಕ ಹಾಗೂ ಉಪಾಧ್ಯಕ್ಷೆಯಾಗಿ ಲೀಲಾವತಿ ಪ್ರಭಾಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಪಂ ಸಭಾಂಗಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ 7ನೇ ವಾರ್ಡಿನ ಸದಸ್ಯ ಕಾಂಗ್ರೆಸ್ ಪಕ್ಷದ ಕಾವಲ್ಲಿ ಶಿವಪ್ಪ ನಾಯಕ ಹಾಗೂ ಉಪಾಧ್ಯಕ್ಷೆ ಸ್ಥಾನಕ್ಕೆ 11 ನೇ ವಾರ್ಡಿನ ಸದಸ್ಯೆ ಡಾಣಿ ಚೌಡಮ್ಮ ಹಾಗೂ 1ನೇ ವಾರ್ಡಿನ ಸದಸ್ಯೆ ಲೀಲಾವತಿ ಪ್ರಭಾಕರ್ ನಾಮ ಪತ್ರ ಸಲ್ಲಿಸಿದ್ದರು. ನಂತರ ಡಾಣಿ ಚೌಡಮ್ಮ ತಮ್ಮ ನಾಮ ಪತ್ರ ಹಿಂಪಡೆದರು. ಅಧ್ಯಕ್ಷರಾಗಿ ಕಾವಲ್ಲಿ ಶಿವಪ್ಪ ನಾಯಕ ಹಾಗೂ ಉಪಾಧ್ಯಕ್ಷರಾಗಿ ಲೀಲಾವತಿ ಪ್ರಭಾಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ತಹಸೀಲ್ದಾರ್ ಎಂ. ರೇಣುಕಾ ಘೋಷಣೆ ಮಾಡಿದರು.

ಪಪಂ ಮುಖ್ಯಾಧಿಕಾರಿ ಎಂ.ಕೆ. ಮುಗಳಿ, ಆರೋಗ್ಯ ನಿರೀಕ್ಷಣಾಧಿಕಾರಿ ಲತಾ, ಚುನಾವಣಾ ಶಿರೆಸ್ತೇದರ್ ಮಹಮದ್ ಗೌಸ್, ಸಿಬ್ಬಂಧಿಗಳಾದ ಶಿವಕುಮಾರ್ ಗೌಡ, ವಾಸುದೇವ, ಕಂದಾಯ ನಿರೀಕ್ಷಕ ಕುಮಾರಸ್ವಾಮಿ ಗ್ರಾಮ ಲೆಕ್ಕಾಧಿಕಾರಿ ಪ್ರಭು ಭಾಗಿಯಾಗಿದ್ದರು.

**ಶಾಸಕರು, ಸಂಸದರು ಭಾಗಿ:**
ಕಳೆದ ರಾತ್ರಿಯಿಂದ ನೆಡೆದ ಬೆಳವಣಿಗೆಯಲ್ಲಿ ಬಿಜೆಪಿ (6 ಸದಸ್ಯರು) ಹಾಗೂ ಜೆಡಿಎಸ್ (5ಸದಸ್ಯರು) ಪಕ್ಷಗಳು ಮೈತ್ರಿ ಮಾಡಿಕೊಂಡಿವೆ ಎಂಬ ಸುದ್ದಿ ಎಲ್ಲಡೆ ಹರಡಿತ್ತು. ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ತಳಾಸ್ ವೆಂಕಟೇಶ್ ಹಾಗೂ ಉಪಾದ್ಯಕ್ಷ ಸ್ಥಾನಕ್ಕೆ ಬಿಜೆಪಿಯ ರೇಣುಕಾಶ್ರೀ ಪರವಾಗಿ ಮತ ಹಾಕುವಂತೆ ಜಿಲ್ಲಾಧ್ಯಕ್ಷರಿಂದ ಬಿಜೆಪಿ ಸದಸ್ಯರಿಗೆ ವಿಪ್ ಸಹ ಜಾರಿ ಮಾಡಲಾಗಿತ್ತು. ಆದರೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಬಿಟ್ಟು ಬೇರೆ ಯಾರು ನಾಮ ಪತ್ರ ಸಲ್ಲಿಸದೇ ಇದ್ದುದ್ದರಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳ ಅವಿರೋಧ ಆಯ್ಕೆ ಸುಗಮವಾಯಿತು. ಬಿಜೆಪಿ ಎಲ್ಲಾ ಸದಸ್ಯರು ಚುನಾವಣೆಯಿಂದ ದೂರು ಉಳಿದರು. ಬಳ್ಳಾರಿ ಲೋಕಸಭಾ ಸದಸ್ಯ ಈ. ತುಕಾರಾಂ ಹಾಗೂ ಕೂಡ್ಲಿಗಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ಪಕ್ಷೇತೇರ ಸದಸ್ಯರಾದ ಬಾಸು ನಾಯ್ಕ್, ವಿ. ಸರಸ್ವತಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಜಿ. ಲಕ್ಷ್ಮೀದೇವಿ, ನಿಂಗಮ್ಮ, ಸೈಯದ್ ಶುಕೂರು, ಡಾಣಿ ಚೌಡಮ್ಮ, ಶಾಂತಮ್ಮ, ಜೆಡಿಎಸ್‌ನ ತಳಾಸ್ ವೆಂಕಟೇಶ್, ಪೂರ್ಯಾ ನಾಯ್ಕ್, ಕೆ. ಈಶಪ್ಪ, ಸಿರಬಿ ಮಂಜುನಾಥ ಭಾಗಿಯಾಗಿದ್ದರು.

> ಪಟ್ಟಣದ ಸಂಡೂರು ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳನ್ನು ಅಗಲಿಕರೀಸಿ ಸುಂದರ ಹಾಗೂ ಸ್ವಚ್ಛ ಪಟ್ಟಣದ ಸಂಕಲ್ಪ ಹೊಂದಿರುವೆ. ಕುಡಿಯುವ ನೀರು, ಆರೋಗ್ಯ, ವಸತಿ ಸೇರಿದಂತೆ ಮೂಲ ಸೌಕರ್ಯಗಳ ಒದಗಿಸುವ ಕನಸು ಹೊಂದಿದ್ದು, ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರ ಸೂಚನೆಯಂತೆ ಕಾರ್ಯ ನಿರ್ವಹಿಸಿ ಪಟ್ಟಣದ ಎಲ್ಲಾ ವಾರ್ಡಿಗೂ ಸೌಕರ್ಯಗಳನ್ನು ಒದಗಿಸುವೆ.
> – ಕಾವಲಿ ಶಿವಪ್ಪನಾಯಕ ನೂತನ ಅಧ್ಯಕ್ಷರು

# ಹಂಪಿಯ ವಿಭಿನ್ನ ಭಂಗಿಯ ಛಾಯಾಚಿತ್ರಗಳ ಪ್ರದರ್ಶನ

## ಜಿಂದಾಲ್‌ನಲ್ಲಿ ವಿಶ್ವ ಛಾಯಾಗ್ರಾಹಣ ದಿನಾಚಾರಣೆ
## ಶಿವಶಂಕರ ಬಣಗಾರ ಏಕವ್ಯಕ್ತಿಯ ಛಾಯಾಚಿತ್ರ ಪ್ರದರ್ಶನ




**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿಯ ಚಿತ್ರಗಳನ್ನು ವಿಭಿನ್ನ ಭಂಗಿಗಳಲ್ಲಿ ಸೆರೆಹಿಡಿದು ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಛಾಯಾಗ್ರಾಹಕ ಶಿವಶಂಕರ ಬಣಗಾರ ಅವರ ಪರಿಶ್ರಮ ಅಗಾಧ ಮತ್ತು ಸಾರ್ಥಕವಾಗಲಿದೆ ಎಂದು ಜೆ ಎಸ್ ಡಬ್ಲ್ಯೂ ಹಿರಿಯ ಉಪಾಧ್ಯಕ್ಷ ರಾಲ್ಫ್ ಸುನೀಲ್ ಹೇಳಿದರು.

ವಿಶ್ವ ಛಾಯಾಗ್ರಹಣ ದಿನಾಚರಣೆಯ ಅಂಗವಾಗಿ ಶಿವಶಂಕರ ಬಣಗಾರರ ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನವನ್ನು ತೋರಣಗಲ್ಲು ಸಮೀಪದ ವಿದ್ಯಾನಗರದಲ್ಲಿರುವ ಹೋಟೆಲ್ ಹಯಾತ್‌ನಲ್ಲಿ ಸೋಮವಾರ ಉದ್ಘಾಟಿಸಿ ಮಾತನಾಡಿದರು. ಎಲ್ಲರೂ ನೋಡುವ ಹಂಪಿಯನ್ನು ಇವರು ವಿಭಿನ್ನವಾಗಿ ಚಿತ್ರಗಳ ಮೂಲಕ ತೋರಿಸುತ್ತಾರೆ. ಇದಕ್ಕೆ ಸಾಕಷ್ಟು ಶ್ರಮ, ತಾಳ್ಮೆ ಬೇಕಾಗುತ್ತದೆ ಎಂದು ಶ್ಲಾಘಿಸಿದರು.

ತೋರಣಗಲ್ಲು ಡಿ.ವೈ.ಎಸ್.ಪಿ. ಪ್ರಸಾದ್ ಗೋಖಲೆ ಮಾತನಾಡಿ, ಶಿವಶಂಕರ ಬಣಗಾರರ ಛಾಯಾಚಿತ್ರಗಳ ಮೂಲಕ ಹಂಪಿಗೆ ಇನ್ನೂ ಹೆಚ್ಚು ಖ್ಯಾತಿ ಸಿಕ್ಕಿದೆ. ಇವರ ಖ್ಯಾತಿ ವಿಶ್ವವಿಖ್ಯಾತವಾಗಲಿ ಎಂದು ಶುಭಕೋರಿದರು. ಈ ಸಂದರ್ಭದಲ್ಲಿ ಹೋಟೆಲ್ ಹಯಾತ್ ನ ಮುಖ್ಯಸ್ಥ ರವೀಂದ್ರನಾಥ್ ಯಕಲಾಪುರ ಹಾಗೂ ಇತರರು ಉಪಸ್ಥಿತರಿದ್ದರು.


COLD PRESSED OILS
HEALTH Benefits

- Heart Healthy
- Diabetes Friendly
- Healthy Skin & More
- Hair Fall Control
Nandi Enterprises
C/o HAMPI TIMES
Valmiki Circle, HOSAPETE
9482599089

ಹಂಪಿ ಟೈಮ್ಸ್
HAMPI TIMES

# ವಿಜ್ಞಾನ

## ಒಂಟೆಗಳು ಏಕೆ ಡುಬ್ಬ(ಹಂಪ್ಸ್) ಹೊಂದಿವೆ?

■ ಆರ್.ಬಿ.ಗುರುಬಸವರಾಜ

ಭಾವನಾ ಮತ್ತು ಹರ್ಷ ಓದುತ್ತಾ ಕುಳಿತಿದ್ದರು. ಮರುಭೂಮಿಯ ಜೀವವೈವಿಧ್ಯದ ಬಗ್ಗೆ ಚರ್ಚಿಸುತ್ತಿದ್ದರು. ನೀರು ಇಲ್ಲದೆಯೂ ಜೀವಿಗಳು ಹೇಗೆ ಜೀವಿಸುತ್ತವೆ ಎಂಬ ಬಗ್ಗೆ ಚರ್ಚೆ ನಡೆಸಿದ್ದರು. ಆಗ ಹರ್ಷ 'ಒಂಟೆಯು ನೀರನ್ನು ತನ್ನ ಡುಬ್ಬದಲ್ಲಿ ಸಂಗ್ರಹಿಸಿಕೊಂಡು ಅಗತ್ಯ ಬಿದ್ದಾಗ ಬಳಸುತ್ತದೆ' ಎಂದು ಹೇಳಿದ. ತಕ್ಷಣ ಭಾವನಾ ಅವನ ಹೇಳಿಕೆಯನ್ನು ಅಲ್ಲಗಳೆದಳು. "ನೀನು ಹೇಳಿದ್ದು ತಪ್ಪು. ಒಂಟೆಯು ಡುಬ್ಬದಲ್ಲಿ ನೀರನ್ನು ಸಂಗ್ರಹಿಸುವುದಿಲ್ಲ. ಅದು ನಿನ್ನ ತಪ್ಪು ತಿಳುವಳಿಕೆ" ಎಂದಳು. ಹಾಗಾದರೆ 'ಒಂಟೆಗಳು ಏಕೆ ಡುಬ್ಬ ಹೊಂದಿವೆ?' ಎಂದನು ಹರ್ಷ. ಅದಕ್ಕೆ ಭಾವನಾ ತನ್ನ ತಿಳುವಳಿಕೆಯ ನೆಲೆಯಲ್ಲಿ ಉತ್ತರಿಸಿದಳು.



ಒಂಟೆಗಳು ಡುಬ್ಬ ಹೊಂದಿರುವ ವಿಶಿಷ್ಟ ಪ್ರಾಣಿಗಳು. ಮರುಭೂಮಿಯಲ್ಲಿ ಜೀವಿಸಲು ಅಗತ್ಯ ಮಾರ್ಪಾಟುಗಳೊಂದಿಗೆ ಡುಬ್ಬ ವಿಕಸನ ಹೊಂದಿದೆ. ಸಾಮಾನ್ಯವಾಗಿ ನಾವು ನಂಬಿರುವಂತೆ ಒಂಟೆಯು ಡುಬ್ಬದಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದಿಲ್ಲ. ಮುಖ್ಯವಾಗಿ ಕೊಬ್ಬನ್ನು ಸಂಗ್ರಹಿಸುವುದಕ್ಕಾಗಿ ಡುಬ್ಬವನ್ನು ಹೊಂದಿದೆ. ಡುಬ್ಬವು ದಟ್ಟವಾದ ನಾರಿನ ಅಂಗಾಂಶ ಮತ್ತು ಅಡಿಪೋಸ್ (ಕೊಬ್ಬಿನ) ಅಂಗಾಂಶಗಳಿಂದ ಕೂಡಿದ್ದು ಕೊಬ್ಬನ್ನು ಸಂಗ್ರಹಿಸಿಕೊಳ್ಳುತ್ತದೆ. ಆಹಾರ ಮತ್ತು ನೀರಿನ ಕೊರತೆಯಾದಾಗ ಡುಬ್ಬದಲ್ಲಿನ ಕೊಬ್ಬಿನಿಂದ ಶಕ್ತಿ ಮತ್ತು ನೀರಿಗೆ ಚಯಾಪಚಯ ಕ್ರಿಯೆಯನ್ನು ಪೂರ್ಣಗೊಳಿಸಿಕೊಳ್ಳುತ್ತದೆ.

ಒಂಟೆ ಆಹಾರ ಸೇವಿಸುವಾಗ ಮತ್ತು ನೀರನ್ನು ಕುಡಿಯುವಾಗ ಸಾಧ್ಯವಾದಷ್ಟು ಹೆಚ್ಚು ಸೇವಿಸುತ್ತದೆ. ಹೆಚ್ಚುವರಿಯಾದ ಪೋಷಕಾಂಶಗಳನ್ನು ಕೊಬ್ಬಿನ ರೂಪದಲ್ಲಿ ಡುಬ್ಬದಲ್ಲಿ ಸಂಗ್ರಹಿಸುತ್ತದೆ. ಆಹಾರ ಮತ್ತು ನೀರು ದೊರೆಯದಿದ್ದಾಗ ಡುಬ್ಬದಲ್ಲಿರುವ ಕೊಬ್ಬನ್ನು ಕರಗಿಸಿ ಚಯಾಪಚಯಗೊಳಿಸುತ್ತದೆ. ಡುಬ್ಬವು ಆಹಾರ ಅಥವಾ ನೀರಿಲ್ಲದೆ ದೀರ್ಘಕಾಲ ಬದುಕಲು ಅನುವು ಮಾಡಿಕೊಡುತ್ತದೆ. ಈ ರೂಪಾಂತರವು ಒಂಟೆಗಳು ವಾಸಿಸುವ ಕಠಿಣ, ಶುಷ್ಕ ಪರಿಸರದಲ್ಲಿ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ.

ಡುಬ್ಬವು ಒಂಟೆಯ ದೇಹದ ಉಷ್ಣತೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಕೊಬ್ಬು ಅವಾಹಕವಾಗಿದ್ದು ಅದು ತಂಪಾದ ಮರುಭೂಮಿ ರಾತ್ರಿಗಳಲ್ಲಿ ಒಂಟೆಯನ್ನು ಬೆಚ್ಚಗಾಗಿಸುತ್ತದೆ ಮತ್ತು ಬಿಸಿ ದಿನಗಳಲ್ಲಿ ಅದರ ದೇಹವನ್ನು ತಣ್ಣಗಾಗಲು ಸಹಾಯ ಮಾಡುತ್ತದೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಭಾರತೀಯ ಹೆಮ್ಮೆಯ ಮಹಿಳಾ ಬಾಕ್ಸರ್ ಮೇರಿ ಕೋಮ್

ಭಾರತೀಯರು ಹೆಮ್ಮೆ ಪಡುವ ಮಹಿಳಾ ಬಾಕ್ಸರ್ ಮೇರಿ ಕೋಮ್ ಇವರು ಮಣಿಪುರದವರು. ವಿಶ್ವ ಬಾಕ್ಸಿಂಗ್ ಮಹಿಳೆಯರ ಚಾಂಪಿಯನ್ಶಿಪ್ ನಲ್ಲಿ ಐದು ಬಾರಿ ವಿಜಯಶಾಲಿಯಾಗಿ ಭಾರತಕ್ಕೆ ಕೀರ್ತಿ ತಂದ ಕ್ರೀಡಾಪಟು.

3/10/2010 ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಕ್ವೀನ್ಸ್ ಬ್ಯಾಟನ್ ಧರಿಸಿದ್ದ ಮಹಿಳಾ ಕ್ರೀಡಾಪಟು.

ಚುಂಗ್ನೈಜಾಂಗ್ ಮೆರಿಕೋಮ್ ಅಥವಾ ಎಂ,ಸಿ ಮೇರಿ ಕೋಮ್ ಎಂದೂ ಕರೆಯಲ್ಪಡುವ ಇವರು ಮಾರ್ಚ್ 1,1983 ರಂದು ಮಣಿಪುರದಲ್ಲಿ ಜನಿಸಿದರು.

ತಂದೆ–ಮಾಂಗ್ಟೆ ಟೋನ್ಪಾ ತಾಯಿ–ಮಾಂಗ್ಟೆ ಅಖಿಮ್ ಕೋಮ್.

ಮೊದಮೊದಲು ಇವರಿಗೆ ಕುಟುಂಬದಿಂದ ಕ್ರೀಡೆಯಲ್ಲಿ ಪ್ರೇರಣೆ ದೊರೆಯದೆ ಮುಂದೆ ಪ್ರಶಸ್ತಿ ಗಳಿಸಿದ ತರುವಾಯ ಸಹಕರಿಸಲು ಕುಟುಂಬ ಪ್ರಾರಂಭಿಸುತ್ತದೆ ಇವರು ಮಣಿಪುರದ ಚುರಾಚಂದಪುರ ಜಿಲ್ಲೆಯವರು. ಮಣಿಪುರದ ಲೋಕ್ಟಾಕ್‌ನಲ್ಲಿರುವ ಕ್ರಿಶ್ಚಿಯನ್ ಮಾಡೆಲ್ ಹೈಸ್ಕೂಲ್, ಮೊಯಿರಾಂಗ್‌ನ ಸೇಂಟ್ ಕ್ಸೇವಿಯರ್ ಶಾಲೆ,ಇಂಫಾಲ್‌ನ ಆದಿಮಜಾತಿ ಹೈಸ್ಕೂಲ್ ಶಿಕ್ಷಣ ಪೂರೈಸಿದರು.

ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದ ಇವರು ಬಾಲ್ಯದಿಂದಲೂ ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು.

ಇವರು ಭಾರತೀಯ ಕ್ರೀಡಾ ಪ್ರಾಧಿಕಾರ,ಖುಮಾನ್ ಲಂಪಾಕ್‌ನಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದರು.

ಇವರ ಕುಟುಂಬ ಆರ್ಥಿಕವಾಗಿ ಅಷ್ಟೇನೂ ಸಬಲರಾಗಿಲ್ಲದ ಕಾರಣ ಸಾಕಷ್ಟು ಕಷ್ಟವನ್ನು ಅನುಭವಿಸಬೇಕಾಯಿತು.

ತರಬೇತಿಗೆ ಬೇಕಾದ ಮೂಲ ಪರಿಕರಗಳು ಇಲ್ಲದೆ ಸಾಕಷ್ಟು ತೊಂದರೆ ಅನುಭವಿಸುದಲ್ಲದೆ ಸ್ವಂತ ವಾಹನವಿಲ್ಲದೆ ದೂರದ ಪ್ರಯಾಣವನ್ನು ಬಸ್ ಮತ್ತು ರೈಲಿನಲ್ಲಿ ಕ್ರಮಿಸುತ್ತಿದ್ದರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಪುರುಷ ಪ್ರಾಬಲ್ಯದ ಸಮಾಜ, ಬಾಕ್ಸಿಂಗ್ ಪುರುಷರಿಗೆ ಮಾತ್ರ ಮೀಸಲಾದ ಕ್ರೀಡೆ ಎಂದು ಪರಿಗಣಿಸಲ್ಪಟ್ಟ ಕಾಲದಲ್ಲಿ ಮೇರಿ ತನ್ನ ಸಾಮರ್ಥ್ಯದ ಮೂಲಕ ಮಹಿಳೆಯರು ಪುರುಷರಿಗಿಂತ ಕಡಿಮೆಯಿಲ್ಲ ಎಂದು ತೋರಿಸಿದವರು, ಸಮಾಜದ ಕಟ್ಟುಪಾಡು ಗಳನ್ನು ಮೀರಿ ಬೆಳೆದವರು ಮೇರಿ.

ಬಾಕ್ಸಿಂಗ್ ಕ್ರೀಡೆ ಮಹಿಳೆ ಯರಿಗೆ ಗೌರವಾನ್ವಿತ ಎಂದು ಪರಿಗಣಿಸ ಲಾಗುವುದಿಲ್ಲ ನಾನು ಬಾಕ್ಸಿಂಗ್ ಚಾಂಪಿ ಯನ್ ಆಗಬಹು ದೆಂದು ಯಾರೂ ಕೂಡ ನಂಬಿರಲಿಲ್ಲ ಸ್ನೇಹಿತರು, ಕುಟುಂಬದವರು ಇದು ನಿನಗೆ ಸರಿಯಾದ ಕ್ರೀಡೆಯಲ್ಲ ಎಂಬುದಾಗಿ ಹೇಳಿದ್ದನ್ನು ಮಾಧ್ಯಮಗಳಲ್ಲಿ ಈ ಹಿಂದೆ ಪ್ರತಿಕ್ರಿಯಿಸಿದ್ದಾರೆ. ಪುರುಷರು ಮಾತ್ರವಲ್ಲ, ಮಹಿಳೆಯರು ಕೂಡ ಏನು ಬೇಕಾದರೂ ಮಾಡಬಹುದು ಎಂದು ತೋರಿಸಲು ಬಯಸಿ ಕಠಿಣ ತರಬೇತಿಯನ್ನು ಎಂ,ನರ್ಜಿತ್ ಸಿಂಗ್ ಇವರಿಂದ ಪಡೆದು ಸಾಧನೆಯನ್ನು ಮಾಡುತ್ತಾರೆ ಇವರು ಮೂರು ಮಕ್ಕಳ ತಾಯಿ ಸದ್ಯ





ಇಂಫಾಲದಲ್ಲಿ ನೆಲೆಸಿದ್ದಾರೆ. ಆರ್ಥಿಕ ಸಂಕಷ್ಟದ ಕಾರಣ ಕುಟುಂಬವನ್ನು ಬೆಂಬಲಿಸಲು ಅವರು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡು 2000 ರಲ್ಲಿ ಬಾಕ್ಸಿಂಗ್ ಪ್ರಾರಂಭಿಸಿದರು.

### ಕ್ರೀಡಾ ಸಾಧನೆಗಳು

ಇವರು ರಾಜ್ಯ,ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಬಾಕ್ಸಿಂಗ್ ಪಂದ್ಯಾವಳಿಗಳಲ್ಲಿ ಭಾಗವಹಿಸಿ ವಿವಿಧ ಪದಕಗಳನ್ನು ಪಡೆದಿರುತ್ತಾರೆ ಅವುಗಳಲ್ಲಿ ಆಯ್ದ ಕ್ರೀಡಾಕೂಟಗಳು ಈ ಕೆಳಗಿನಂತಿವೆ.

1. 2000(ಮಣಿಪುರ)ಮೊದಲ ರಾಜ್ಯ ಮಟ್ಟದ ಆಹ್ವಾನಿತ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ತಮ್ಮ ಮೊದಲ ಪ್ರಶಸ್ತಿಯನ್ನು ಮತ್ತು ಅತ್ಯುತ್ತಮ ಬಾಕ್ಸರ್ ಟೈಟಲ್ ಗೆದ್ದರು.
2. 2000 ರಿಂದ 2005 ರ ವರವಿಗೆ ಕ್ರಮವಾಗಿ 05 ಭಾರತೀಯ ರಾಷ್ಟ್ರೀಯ ಚಾಂಪಿಯನ್ಶಿಪ್ಗಳಲ್ಲಿ ಜಯಶಾಲಿಯಾಗಿ ಅಂತರರಾಷ್ಟ್ರೀಯ ಅಭಿಯಾನವನ್ನು ಪ್ರಾರಂಭಿಸಿದರು.
3. 2001(ಯು,ಎಸ್.)1ನೇ ಎ,ಐ,ಬಿ,ಎ.ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ.
4. 2002 (ಟರ್ಕಿ)2ನೇ ಎ,ಐ,ಬಿ,ಎ. ವಿಶ್ವ ಮಹಿಳಾ ಸೀನಿಯರ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ.
5. 2008–ವಿಶ್ವ ಹವ್ಯಾಸಿ ಬಾಕ್ಸಿಂಗ್‌ನಲ್ಲಿ ಚಿನ್ನ.
6. 2010(ಬಾರ್ಬಡೋಸ್‌ನ ಬ್ರಿಡ್ಜ್‌ಟೌನ್) 5ನೇ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಗೆದ್ದಿದ್ದಾರೆ.
7. 2004(ನಾರ್ವೆ) ಮಹಿಳಾ ವಿಶ್ವ ಬಾಕ್ಸಿಂಗ್ ಟೂರ್ನಿಯಲ್ಲಿ ಚಿನ್ನ ಅದೇ ವರ್ಷದಲ್ಲಿ ವಿಚ್ ಕಪ್ ಟೂರ್ನಮೆಂಟ್ ಚಾಂಪಿಯನ್.
8. 2005 (ರಷ್ಯಾ) 3ನೇ ಎ,ಐ,ಬಿ,ಎ.ಮಹಿಳಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ವಿಶ್ವ ಪ್ರಶಸ್ತಿಯನ್ನು ಪಡೆದಿದ್ದಾರೆ.
9. 2006 (ನವದೆಹಲಿ) ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ.
10. 2008(ಚೀನಾ) ಎ,ಐ,ಬಿ,ಎ.ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ.
11. 2010 (ಚೀನಾ) ಏಷ್ಯನ್ ಗೇಮ್ಸ್‌ನಲ್ಲಿ ಕಂಚು,ಅದೇ ವರ್ಷ ಬಾರ್ಬಡೋಸ್‌ನಲ್ಲಿ ನಡೆದ ಎ,ಐ,ಬಿ,ಎ.ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ.
12. 2012 ರ ಬೇಸಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಏಕೈಕ ಭಾರತೀಯ ಮಹಿಳಾ ಬಾಕ್ಸರ್ ಆಗಿದ್ದು ಫ್ಲೈವೇಟ್ (51 ಕೆಜಿ) ವಿಭಾಗದಲ್ಲಿ ಸ್ಪರ್ಧಿಸಿ ಕಂಚಿನ ಪದಕವನ್ನು ಗೆದ್ದರು.

ಇವರು 2006 ರಿಂದಲೂ ಇಂಫಾಲ್‌ದಲ್ಲಿ ಎಂ,ಸಿ.ಮೇರಿ ಕೋಮ್ ಬಾಕ್ಸಿಂಗ್ ಅಕಾಡೆಮಿ(ಗರ್ಲ್ಸ್)ಸ್ಥಾಪಿಸಿ ಯುವ ಪ್ರತಿಭೆಗಳಿಗೆ ತರಬೇತಿ ನೀಡುತ್ತಿದ್ದಾರೆ.

### ಪ್ರಶಸ್ತಿ ಮತ್ತು ಪುರಸ್ಕಾರಗಳು

2020–ಪದ್ಮವಿಭೂಷಣ,2013–ಪದ್ಮಭೂಷಣ,2009–ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ,2006–ಪದ್ಮಶ್ರೀ,
2003–ಅರ್ಜುನ ಪ್ರಶಸ್ತಿ (ಬಾಕ್ಸಿಂಗ್).

ಇಂಟರ್ನ್ಯಾಷನಲ್ ಬಾಕ್ಸಿಂಗ್ ಅಸೋಸಿಯೇಷನ್ ?"ಭರವಸೆಯ ಬಾಕ್ಸಿಂಗ್ ವೃತ್ತಿ"ಗಾಗಿ ಮೊದಲ ಎ,ಐ,ಬಿ, ಎ.ಲೆಜೆಂಡ್ಸ್ ಪ್ರಶಸ್ತಿಗಳನ್ನು ನೀಡಿದೆ.

ಇಂಟರ್ನ್ಯಾಷನಲ್ ಬಾಕ್ಸಿಂಗ್ ಅಸೋಸಿಯೇಷನ್ ?2016 ರ ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ಗಳ ಬ್ರ್ಯಾಂಡ್ ಅಂಬಾಸಿಡರ್ ಎಂದು ಘೋಷಿಸಿದೆ.

2007–ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್,ಸಿ,ಎನ್,ಎನ್ –ಐ,ಬಿ, ಎನ್. ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ರಿಯಲ್ ಹೀರೋಸ್ ಅವಾರ್ಡ್.

2008–ಪೆಪ್ಸಿ ಎಂ,ಟಿ ,ವಿ.ಯೂತ್ ಐಕಾನ್,2008–'ಮ್ಯಾಗ್ನಿಫಿಸೆಂಟ್ ಮೇರಿ,ಮಹಿಳಾ ಬಾಕ್ಸಿಂಗ್ 2009 ರ ಅಂತರರಾಷ್ಟ್ರೀಯ ಬಾಕ್ಸಿಂಗ್ ಅಸೋಸಿಯೇಶನ್ ರಾಯಭಾರಿ,

2010 ರ ವರ್ಷದ ಕ್ರೀಡಾಳು(ಸಹಾರಾ ಕ್ರೀಡಾ ಪ್ರಶಸ್ತಿ)

29 ಮಾರ್ಚ್ 2016 ರಂದು ಈಶಾನ್ಯ ಹಿಲ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಮತ್ತು 14 ಜನವರಿ 2019 ರಂದು ಕಾಜಿರಂಗ ವಿಶ್ವವಿದ್ಯಾಲಯದಿಂದ ( ಡಿ.ಫಿಲ್ ) ಪದವಿ.

2016– ಭಾರತೀಯ ಸಂಸತ್ತಿನ ಮೇಲ್ಮನೆಯಾದ ರಾಜ್ಯಸಭೆಯ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿತ್ತು.

2017–ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಇವರನ್ನು ಬಾಕ್ಸಿಂಗ್ ರಾಷ್ಟ್ರೀಯ ವೀಕ್ಷಕರನ್ನಾಗಿ ನೇಮಿಸಿತ್ತು.

ಕೌಟುಂಬಿಕ ಕಷ್ಟಗಳನ್ನು ಮೀರಿ ಬೆಳೆದ ಮಹಿಳಾ ಕ್ರೀಡಾಪಟು ದೇಶಕ್ಕೆ ಮಾದರಿ ಇಂತಹ ತಾಯಂದಿರಿಂದ ಇಂದಿನ ಯುವ ಸಮೂಹ ಕಲಿಯುವುದು ಸಾಕಷ್ಟಿದೆ. ಮಗಳಾಗಿ ನಂತರ ತಾಯಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತು ಸಾಧಿಸುವುದು ಇದೆಯಲ್ಲ ಅದು ನಿಜವಾದ ಸಾಧನೆ.

ಭಾರತದ ಕ್ರೀಡಾ ವೀರನಾರಿಗೆ ಶರಣು ಶರಣಾರ್ಥಿಗಳು.

# ಚಿನ್ನದ ಪದಕಗಳ ರಾಣಿ ಪಿ ಟಿ ಉಷಾ... ಗತ ವೈಭವದ ನೆನಪು

ಭಾರತದ ನೆಲದಲ್ಲಿ ಹುಟ್ಟಿ ಇಡಿ ಜಗತ್ತಿನಲ್ಲಿ ಭಾರತದ ಕೀರ್ತಿಯನ್ನು ಹೆಚ್ಚಿಸಿದ ಪಯ್ಯೋಲಿ ಎಕ್ಸ್ ಪ್ರೆಸ್ ಎಂದೇ ಹೆಸರಾದ ಓಟದ ರಾಣಿ ಪಿಟಿ ಉಷಾ ಯಾರಿಗೆ ಗೊತ್ತಿಲ್ಲ. ಮೂರನೇ ತರಗತಿಯಲ್ಲಿ ಓದುತ್ತಿದ್ದ ನನಗೆ ತರಂಗ ವಾರಪತ್ರಿಕೆಯ ಮುಖಪುಟದಲ್ಲಿ ಆಕೆಯ ಚಿತ್ರ ಕಂಡು ಸಡಗರ, ಸಂಭ್ರಮ. ಆಕೆಯ ಕುರಿತು ಪತ್ರಿಕೆಯಲ್ಲಿ ಓದಿ, ಅದನ್ನು ಕತ್ತರಿಸಿ ನನ್ನ ಪುಸ್ತಕ ಒಂದರಲ್ಲಿ ಎತ್ತಿಟ್ಟುಕೊಂಡದ್ದು ಮಧುರ ನೆನಪು.

ಪಿಲವುಕಂಡಿ ತೆಕಪರಂಬ್ಲಿ ಉಷಾ ಭಾರತದ ದಕ್ಷಿಣ ತುದಿಯ ಕೇರಳ ರಾಜ್ಯದ ಕೋಜಿಕೋಡ್ ಜಿಲ್ಲೆಯ ಕೂತಲಿ ಎಂಬ ಪುಟ್ಟ ಗ್ರಾಮದ ಸಾಧಾರಣ ಮನೆತನದಲ್ಲಿ 27 ಜೂನ್ 1964 ರಲ್ಲಿ ಜನಿಸಿದರು. ಅಷ್ಟೇನೂ ಉತ್ತಮವಲ್ಲದ ಆರ್ಥಿಕ ಪರಿಸ್ಥಿತಿಯನ್ನು ಹೊಂದಿದ್ದರೂ ಆಗಸವೇ ಮಿತಿ ಎಂಬಂತಹ ಅತ್ಯುನ್ನತ ಕನಸುಗಳನ್ನು ಪೋಷಿಸಿದಾಕೆ ಉಷಾ. ಚಿಕ್ಕಂದಿನಿಂದಲೂ ಪಾದರಸದಂತೆ ಓಡಾಡುತ್ತಿದ್ದ ಆಕೆಯ ಕಾಲುಗಳಲ್ಲಿ ಅದಮ್ಯ ಶಕ್ತಿ, ತಾಕತ್ತುಗಳು ಇದ್ದು ಶೀಘ್ರವೇ ಆಕೆಯ ವೇಗ ಎಲ್ಲರ ಗಮನ ಸೆಳೆಯಿತು. ಕೋಚ್ ನಂಬಿಯಾರದ ಗರಡಿಯಲ್ಲಿ ಪಳಗಿದ ಆಕೆ ತನ್ನ ಬದ್ಧತೆಯಿಂದಾಗಿ ಎಂದೂ ಹಿಂದಿರುಗಿ ನೋಡುವ ಪ್ರಸಂಗ ಬರಲೇ ಇಲ್ಲ. ಆಕೆಯ ಕೋಚ್ ಓ ಪಿ ನಂಬಿಯಾರ್ 1977ರಲ್ಲಿ ಬಹುಮಾನ ವಿತರಣಾ ಸಮಾರಂಭವೊಂದರಲ್ಲಿ ಆಕೆಯನ್ನು ಮೊದಲ ಬಾರಿ ಗಮನಿಸಿದರು. ನಂಬಿಯಾರ್ ಅವರಿಗೆ ಆಕೆಯ ವೇಗದ ನಡಿಗೆ ಮತ್ತು ತೆಳುವಾದ ಕಾಯದಲ್ಲಿ ಆಕೆ ಭಾರತದ ಅಥ್ಲೆಟಿಕ್ ಇತಿಹಾಸದ ಭವಿಷ್ಯವನ್ನು ಬದಲಿಸಬಲ್ಲಳು ಎಂಬ ಭರವಸೆ ಮೂಡಿತು ಎಂದು ಹೇಳುತ್ತಾರೆ. ಅದೇ ವರ್ಷ ಆಕೆಗೆ ತರಬೇತಿ ಪ್ರಾರಂಭಿಸಿದ ನಂಬಿಯಾರ್



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಭರವಸೆಯನ್ನು ಹುಸಿ ಮಾಡದ ಉಷಾ 1978 ರಲ್ಲಿ ಕೊಲ್ಲಂನಲ್ಲಿ ನಡೆದ ಅಂತರ್ ರಾಜ್ಯ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ 100 ಮೀಟರ್, 200 ಮೀಟರ್, 60 ಮೀಟರ್ ಹರ್ಡಲ್ ಮತ್ತು ಎತ್ತರ ಜಿಗಿತಗಳಲ್ಲಿ ಚಿನ್ನದ ಪದಕವನ್ನು ಗಳಿಸಿದರೆ, ಉದ್ದ ಜಿಗಿತದಲ್ಲಿ ರಜತ ಮತ್ತು 4*100 ಮೀಟರ್ ರಿಲೇ ಪಂದ್ಯಗಳಲ್ಲಿ ಕಂಚಿನ ಪದಕವನ್ನು ಗಳಿಸಿದಳು. 1979 ರಲ್ಲಿಯೂ ಅತ್ಯಧಿಕ ಪದಕಗಳನ್ನು ಗಳಿಸಿದ ಆಕೆ ಪಾಕಿಸ್ತಾನದ ಕರಾಚಿಯಲ್ಲಿ ತನ್ನ ಮೊಟ್ಟ ಮೊದಲ ಅಂತರಾಷ್ಟ್ರೀಯ



ಪಂದ್ಯಾವಳಿಗಳಾದ ಕೈದ್ ಎ ಆಜಮ್ ಕೂಟದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಸಂಪಾದಿಸಿದಳು.

ಮುಂದೆ 1981 ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 100 ಮೀಟರ್ ಓಟವನ್ನು 11.6 ಸೆಕೆಂಡುಗಳಲ್ಲಿ ಮತ್ತು 200 ಮೀಟರ್ ಓಟವನ್ನು 24.8 ಸೆಕೆಂಡ್ಗಳಲ್ಲಿ ಓಡಿ ನೂತನ ರಾಷ್ಟ್ರೀಯ ದಾಖಲೆ ಸ್ಥಾಪಿಸಿದಳು.

ಮುಂದಿನ ಒಂದೊಂದು ಹಂತಗಳನ್ನು ತಲುಪಿದ ಪಿ ಟಿ ಉಷಾ 1982 ರಿಂದ 1994 ರವರೆಗೆ ನಡೆದ ಏಷ್ಯನ್ ಗೇಮ್ಸ್ ನಲ್ಲಿ ಹದಿನಾಲ್ಕು ಚಿನ್ನದ ಪದಕಗಳನ್ನು ಗಳಿಸಿ ಚಿನ್ನದ ರಾಣಿ ಎನಿಸಿಕೊಂಡಳು. 1984 ರಲ್ಲಿ ಲಾಸ್ ಎಂಜಲೀಸ್ ನಲ್ಲಿ ನಡೆದ ಒಲಂಪಿಕ್ ಪಂದ್ಯಾವಳಿಗಳಲ್ಲಿ 400 ಮೀಟರ್ ಹರ್ಡಲ್ ನಲ್ಲಿ ಕೇವಲ ಒಂದು ಸೆಕೆಂಡಿನ ಅಂತರದ ಹಿನ್ನಡೆಯಾಗಿ ನಾಲ್ಕನೇ ಸ್ಥಾನವನ್ನು ಗಳಿಸಿದಳು. ಕೇವಲ ಒಂದು ಸೆಕೆಂಡಿನಲ್ಲಿ ಕಂಚಿನ ಪದಕ ಕಳೆದುಕೊಂಡರೂ ಕೂಡ ಅಂದು ಆಕೆ ತೋರಿದ ಅಮೋಘ ಪ್ರದರ್ಶನ ಭಾರತದ ಅಥ್ಲೆಟಿಕ್ ನಲ್ಲಿ ಸುವರ್ಣ ಅಕ್ಷರದಲ್ಲಿ ಬರೆಯುವಂತಹ ಇತಿಹಾಸ ಸೃಷ್ಟಿಸಿತು.

1983 ರಿಂದ 1989ರ ಅವಧಿಯಲ್ಲಿ.... 1985ರಲ್ಲಿ ಜಕಾರ್ತದಲ್ಲಿ ನಡೆದ ಆರನೇ ಟ್ರ್ಯಾಕ್ ಅಂಡ್ ಫೀಲ್ಡ್ ಅಥ್ಲೆಟಿಕ್ ನಲ್ಲಿ ಐದು ಚಿನ್ನದ ಪದಕಗಳನ್ನು ಪಡೆದ ಏಕಮೇವ ಮಹಿಳಾ ಆಟಗಾರ್ತಿ ಎನಿಸಿದರು ಉಷಾ.

1986ರಲ್ಲಿ ಸಿಯೋಲ್ ನಲ್ಲಿ ನಡೆದ ಹತ್ತನೇ ಏಷ್ಯನ್ ಗೇಮ್ಸ್ ನಲ್ಲಿ ನಾಲ್ಕು ಚಿನ್ನ ಮತ್ತು ಒಂದು ಬೆಳ್ಳಿಯ ಪದಕವನ್ನು ಗೆದ್ದರು. ಅಂತರರಾಷ್ಟ್ರೀಯ ಅಥ್ಲೆಟಿಕ್ ಕೂಟವೊಂದರಲ್ಲಿ ಹೀಗೆ ಎಲ್ಲ ಚಿನ್ನದ ಪದಕಗಳನ್ನು ಕಡೆದ ಏಕಮೇವಾದ್ವಿತೀಯ ಓಟಗಾರ್ತಿಯಾಗಿ ಚಿನ್ನದ ರಾಣಿ ಎಂದು ಕರೆಯಲ್ಪಟ್ಟದ್ದು ಪಿ ಟಿ ಉಷಾರ ಹೆಗ್ಗಳಿಕೆ.

ಪಿ ಟಿ ಉಷಾ ಅವರ ಅಸಾಮಾನ್ಯ ಪ್ರತಿಭೆ,ಕಠಿಣ ಪರಿಶ್ರಮ ಮತ್ತು ಬದ್ಧತೆಗೆ 1984 ರಲ್ಲಿ ಅರ್ಜುನ ಪ್ರಶಸ್ತಿ ಮತ್ತು 1985ರಲ್ಲಿ ಪದ್ಮಶ್ರೀ ಪ್ರಶಸ್ತಿಗಳು ಭಾರತ ಘನ ಸರ್ಕಾರವು ನೀಡಿ ಗೌರವಿಸಿತು.

ಜೀವಮಾನದ ಅದ್ಭುತ ಸಾಧನೆ ತೋರಿದ ಉಷಾ ಅವರ ಓಟ ಇಲ್ಲಿಗೆ ನಿಲ್ಲಲಿಲ್ಲ.... ಉಷಾ ಅಥ್ಲೆಟಿಕ್ ಶಾಲೆಯನ್ನು ತೆರೆದ ಆಕೆ ಇಂದಿಗೂ ಕೂಡ ಯುವ ಅಥ್ಲೀಟ್ಗಳಿಗೆ ತರಬೇತಿ ನೀಡುತ್ತಿದ್ದಾರೆ. ಕಠಿಣ ಪರಿಶ್ರಮ ಮತ್ತು ಬದ್ಧತೆಯನ್ನು ಹೊಂದಿದ್ದರೆ ನಿಮ್ಮ ಕನಸುಗಳನ್ನು ನನಸಾಗಿಸಲು ಸಾಧ್ಯ ಎಂಬುದು ಆಕೆಯ ಧ್ಯೇಯ ಮಂತ್ರವಾಗಿದೆ.

ಪಿ ಟಿ ಉಷಾ ಅವರ ಈ ಅದ್ಭುತ ಸಾಧನೆಯು ಸಂಘರ್ಷ, ಬದ್ಧತೆ ಮತ್ತು ಯಶಸ್ಸುಗಳ ಮಿಶ್ರಣ. ಆಕೆ " ನಮಗೆ ಜೀವನದಲ್ಲಿ ಅದೆಷ್ಟೇ ಕಷ್ಟಗಳು ಬಂದರೂ ಸರಿಯೇ, ನಿಮ್ಮ ಆಶಯಗಳು ಅದಕ್ಕಿಂತ ಹೆಚ್ಚು ಬಲಿಷ್ಠವಾಗಿದ್ದರೆ ಖಂಡಿತವಾಗಿಯೂ ನೀವು ಗೆಲ್ಲುತ್ತೀರಿ" ಎಂದು ಯುವ ಸಮೂಹವನ್ನು ಪ್ರೋತ್ಸಾಹಿಸುತ್ತಾರೆ.ಪಿ ಟಿ ಉಷಾ 2000ನೇ ಇಸವಿಯಲ್ಲಿ ನಿವೃತ್ತಿಯನ್ನು ಘೋಷಿಸಿದಳು.

ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ ನಲ್ಲಿ ಇಂಗ್ಲೀಷ್ ಇನ್ಸಪೆಕ್ಟರ್ ಆಗಿರುವ ವಿ ಶ್ರೀನಿವಾಸನ್ ಅವರನ್ನು ಮದುವೆಯಾಗಿರುವ ಪಿ ಟಿ ಉಷಾ ಅವರಿಗೆ ಉಜ್ವಲ ಎಂಬ ಮಗನಿದ್ದಾನೆ.

ಪ್ರಸ್ತುತ ಭಾರತ ದೇಶದಾದ್ಯಂತ ಶಾಲೆಗಳಲ್ಲಿ ನಡೆಸಲಾಗುವ ಇಂಡಿಯನ್ ಟ್ಯಾಲೆಂಟ್ ಒಲಂಪಿಯಾಡ ಪರೀಕ್ಷೆಗಳನ್ನು ನಡೆಸುವ ಇಂಡಿಯನ್ ಟ್ಯಾಲೆಂಟ್ ಆರ್ಗನೈಜೇಷನ್ ನ ಮುಖ್ಯಸ್ಥೆಯಾಗಿ ನೇಮಕವಾಗಿರುವರು.

ಜುಲೈ 1922 ರಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಆಕೆಯನ್ನು ಸಂಸತ್ತಿನ ರಾಜ್ಯಸಭೆಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದರು. ಡಿಸೆಂಬರ್ ನಲ್ಲಿ ಮತ್ತೆ ಪಿ ಟಿ ಉಷಾ ಅವರನ್ನು ಸಂಸತ್ತಿನ ರಾಜ್ಯಸಭೆಯ ಮುಖ್ಯ ಉಪ ಸಭಾಪತಿಯಾಗಿ ಅಂಗೀಕರಿಸಿದ್ದು ನಾಮನಿರ್ದೇಶಿತ ಸದಸ್ಯೆಯೊಬ್ಬರು ಉಪ ಸಭಾಪತಿಯಾಗಿರುವುದು ಸಂಸತ್ತಿನ ಇತಿಹಾಸದಲ್ಲಿಯೇ ಮೊದಲು ಎಂಬ ಹೆಗ್ಗಳಿಕೆಯ ಗರಿ ಪಿ ಟಿ ಉಷಾರ ಕಿರೀಟಕ್ಕಿದೆ.

ಖುದ್ದು ಪಿಟಿ ಉಷಾ ಹೇಳುವುದು ಹೀಗೆ.... ದೇಶಕ್ಕಾಗಿ ಮೆಡಲ್ ಗೆಲ್ಲಬೇಕೆಂಬುದು ಎಲ್ಲಾ ಆಟಗಾರರ ಮಹದಾಕಾಂಕ್ಷೆ ನಿಜ, ಪ್ರತಿ ಬಾರಿ ನನ್ನ ಓಟವನ್ನು ಮತ್ತಷ್ಟು ಉತ್ತಮಗೊಳಿಸುವುದು ಕೂಡ ನನ್ನ ಅದಮ್ಯ ಆಕಾಂಕ್ಷಿಯಾಗಿದ್ದು ಅದುವೇ ನನ್ನ ಜೀವನದ ಧ್ಯೇಯವಾಗಿತ್ತು. ಅದ್ವಿತೀಯ ಹೋರಾಟ, ಅವಿಚಲಿತ ಬದ್ಧತೆ ಮತ್ತು ಯಶಸ್ಸಿನ ಅದ್ಭುತ ಉದಾಹರಣೆಯಾಗಿ ಪಿ ಟಿ ಉಷಾ ನಮ್ಮ ಮುಂದಿದ್ದಾರೆ. ಆಕೆಯ ಜೀವನ ಸಾಧನೆ ಅದೆಷ್ಟೇ ಪರಿಸ್ಥಿತಿಗಳು ಕಠಿಣವಾಗಿದ್ದರು ನಿಮ್ಮ ಆಕಾಂಕ್ಷೆಗಳು ಉನ್ನತವಾಗಿದ್ದರೆ ಯಶಸ್ಸು ಖಂಡಿತ ಸಾಧ್ಯ ಎಂಬುದನ್ನು ಒತ್ತಿ ಹೇಳುತ್ತದೆ.

## ಕವಿ ಮನಸು

### ಬಂಗಾಳದ ಮಣ್ಣಿನಲ್ಲಿ.....!!!



ಬಂಗಾಳದ ಮಣ್ಣಿನಲ್ಲಿ
ರಣ ಮೃಗಗಳ
ಅಟ್ಟಹಾಸ;
ರಕ್ಷಣೆಯ
ಹೆಸರಲ್ಲಿ
ನಿಂತು
ವೈದ್ಯೆಯಾಗುವ
ಕನಸು ಕಂಡಿದ್ದ
ಮುಗ್ದ ಹೃದಯವನ್ನು
ಮುಕ್ಕಿ ತಿಂದ ರಕ್ಕಸ;
ಕಾಮದ ಕಣ್ಣಿನಲ್ಲಿ
ಹೊಂಚುಹಾಕಿ
ಸಂಚು ಮಾಡಿ
ಪರರ
ಜೀವ ಉಳಿಸುವ
ಕರ್ಮವ ಮಾಡುವ
ಎದೆಯನ್ನೇ ಬಗೆದ
ದೃಷ್ಟ ರಾಕ್ಷಸ;
ಕಾಯಕದ ನೆರಳಲಿ
ನೆರವಾಗುವ ಮನಕೆ
ಬಿರುಗಾಳಿಯಂತೆ
ಮೇಲೆರಗಿ
ಮುಗ್ದ ಹೆಣ್ಣನು
ಕುಕ್ಕಿ ತಿಂದ
ಹದ್ದು ಹಾರಿ ಹೋಗಿದೆ;
ಪ್ರಭುತ್ವವೇ ಹೆಣ್ಣಾಗಿದ್ದರೂ
ಬೀದಿಗೆ ಬಂದು
ಕಾನೂನಿನ ಕೈಗಳನು
ಬಾಗಿಸಲು
ಹೊರಟಿದ್ದು
ಇತಿಹಾಸ;
ನೆಲದ ಹೆಣ್ಣುಗಳ
ಅತ್ಯಾಚಾರದ
ಸಾವುಗಳಿಗೆ
ಕೊನೆ ಯಾವಾಗ
ಎಂಬುದೇ
ಪ್ರಶ್ನಾರ್ಥಕ;
ಕಠಿಣ ಕ್ರಮ
ಎನ್ನುವ ಪ್ರಹಸನಕ್ಕೆ
ನ್ಯಾಯಾಲಯಗಳು
ಎಂದು;
ಕೊನೆಯ ಮಳೆಯ
ಹೊಡೆಯುವುವೋ
ಕಾದು ನೋಡಬೇಕಾಗಿದೆ....!!!!

– ಕಾಡಜ್ಜಿ ಮಂಜುನಾಥ

### ರಾಖಿ ಹಬ್ಬ




ಬಾರೆ ಅಕ್ಕ ಬಾರೆ ತಂಗಿ
ರಾಖಿ ಕಟ್ಟೋದಕ
ಮರ್ತಿಯೇನೆ ನಿನ್ನ ಅಣ್ಣನ
ರಾಖಿಯ ಹಬ್ಬಕೆ ಕರಿಲಾಕ

ರಾಖಿಯ ಹಬ್ಬವಿದು
ನಮ್ಮ ಬಂಧ ಬೆಸೆದಿಹುದು
ಬಿಡಿಸಲಾಗದ ಬಂಧವಿದು
ಅನವರತ ಇರುವುದು

ಮರೆಯಲಾಗದ ಉಡುಗೊರೆ
ಒಂದು ನಿನಗೆ ತಂದೀನಿ
ಕಟ್ಟು ಬಾರೆ ರಾಖಿಯನು
ನನ್ನ ಕೈ ಮುಂದೆ ಹಿಡಿದಿನಿ

ಅಣ್ಣ ತಂಗಿಯ ನಡುವೆ
ಭೇದ ಭಾವನೆಗಳಿಲ್ಲ
ನನ್ನ ನಿನ್ನ ಹೃದಯದ ಒಳಗೆ
ರುಧಿರವದು ಬೇರೆ ಏನಿಲ್ಲ

ಒಂದೇ ತಾಯಿ ಮಕ್ಕಳು ನಾವು
ಒಂದಾಗಿ ಬಾಳೋಣ
ಕಷ್ಟ ಸುಖಗಳು ಏನೇ ಇದ್ದರೂ
ನಾವು ಹಂಚಿಕೊಳ್ಳೋಣ

– ಕೆ ಎಂ ಬಸವರಾಜ
ಹೊಸಪೇಟೆ

ವಿಶ್ವ ಛಾಯಾಗ್ರಾಹಕರ ದಿನ

# ನಗಿಸುವ ಮಾಂತ್ರಿಕ ಛಾಯಾಗ್ರಾಹಕ

ವಯಸ್ಸು ಹನ್ನೊಂದು ಇರಬಹುದು, ಅದೊಂದು ದಿನ ಶಿಕ್ಷಕರು ನವೋದಯ ಪರೀಕ್ಷೆ ತಗೆದುಕೊಳ್ಳಲು ಆಸಕ್ತಿ ಉಳ್ಳವರು. ಇನ್ನೆರೆಡು ದಿನದೊಳಗೆ ಪಾಸ್ಪೋರ್ಟ್ ಅಳತೆಯ ಮುದ್ದಾದ ಭಾವಚಿತ್ರವನ್ನು ತಗೆದುಕೊಂಡು ಬನ್ನಿ ಎನ್ನುವ ಸೂಚನೆವಿತ್ತರು. ಮನದೊಳಗೆ ಪರೀಕ್ಷೆ ಬರೆಯುವ ಆಸೆ ಚಿಗುರಿತು.ಆದರೆ ಆ ದಿನದಲ್ಲಿ ಪೋಟೋಕ್ಕೆ ಪಕ್ಕದ ಪಟ್ಟಣಕ್ಕೆ ತೆರಳಲೇಬೇಕಾಗಿತ್ತು. ಪೊಟೋ ತಗೆಸಿದರೆ ದೇಹ ಸ್ಥೂಲವಾಗುತ್ತದೆ ಎನ್ನುವ ರುಮೊರ್ಸ್ ಹಳ್ಳಿಗಳಲ್ಲಿ ಸಂಚಾರ ಮಾಡುತ್ತಿತ್ತು ಆದರೂ ಸಹ ಜನ್ಮಧಾತರ ಅಪ್ಪಣೆ ಮೇರೆಗೆ ಅವರೇ ಕಳುಹಿಸಿದ ಸ್ಟುಡೀಯೋ ವಿಳಾಸಕ್ಕೆ ತಲುಪಿದೆ. ಚಿಕ್ಕ ಆಕೃತಿ ದೊಡ್ಡ ಉದರದ ಕಾಯದಲ್ಲಿ, ಅರೆ ತೆರೆದಿರುವ ಎಡಗಣ್ಣು ಮೋಸ್ಟ್ಲಿ ವೃತ್ತಿಯ ಸಂಕೇತವಿರಬಹುದೇನೋ ಗೊತ್ತಿಲ್ಲ, ಕೊರಳಲ್ಲಿ ಕರಿಯ ಪೆಟ್ಟಿಗೆ ನೇತಾಡುತ್ತಿತ್ತು. ಪಾಸ್ಪೋರ್ಟ್ ಅಳತೆಯ ಭಾವಚಿತ್ರದ ಅಹವಾಲನ್ನು ಸ್ವೀಕರಿಸಿದ ವ್ಯಕ್ತಿ ಪೋಟೋ ಕ್ಲಿಕ್ ಸುವ ಸ್ಥಳಕ್ಕೆ ಕಳುಹಿಸಿದರು. ಅಲ್ಲಿರುವ ಕನ್ನಡಿ ಮುಂದೆ ನಿಂತು ಜರೂರಾಗಿ ತಲೆ ಬಾಚಿಕೊಂಡೆ. ಕಪ್ಪು ನೀಲಿ ಮಿಶ್ರಿತ ಪರದೆಗೆ ಬೆನ್ನು ಮಾಡಿ ನಿಂತಾಗ.ಹಾಲ್ ಬಲ್ಬಗಳು ಹೊತ್ತಿದವು,ಮುಖದಲ್ಲಿ ಕಾಂತಿ ಮೂಡಿತು.ತಕ್ಷಣವೇ ಕೊರಳಲ್ಲಿದ್ದ ಕೆಮರಾ ತಗೆದು ಸ್ಟಾಂಡ್ ಮೇಲಿಟ್ಟ ವ್ಯಕ್ತಿ.ಎಡಗಣ್ಣನ್ನು ಪೂರ್ಣ ಮುಚ್ಚಿ, ಕೆಮರಾ ಕಿಂಡಿಯಿಂದ ಸೆರೆ ಹಿಡಿಯುವ ಆಕೃತಿಯನ್ನು ಇನ್ನೊಂದು ಕಣ್ಣು ಅದರೊಳಗಿನಿಂದ ಹುಡುಕುತಿತ್ತು. ಕರಗಳೆರೆಡು ಮಸೂರವನ್ನು ಹೊಂದಿಸುತ್ತಿದ್ದವು. ಅದರಲ್ಲಿರುವ ರೀಲುಗಳು ನಷ್ಟವಾಗದ ರೀತಿಯಲ್ಲಿ ಪೋಟೋ ಕ್ಲಿಕ್ಕಿಸುವುದು ಒಂದು ಚಾಕಚಕ್ಯತೆಯಾಗಿತ್ತು. ಅದರಲ್ಲಿ ತಲ್ಲೀನರಾಗಿದ್ದ ಕೆಮರಾಮೆನ್ ಛಾಯ ಕೊಠಡಿಯೊಳಗೆ ಅಳಿದುಳಿದ ದೀಪಗಳನ್ನು ಹೊತ್ತಿಸಿ ಇಲ್ಲಿ ನೋಡಿ ಎಂದ ಕೂಡಲೇ ಕರ್ಕ್ ಎನ್ನುವ ಶಬ್ದವು ಬಂದಿತು. ದೇಹವನ್ನೆ ಸ್ಕ್ಯಾನ್ ಮಾಡಿಸಿಕೊಂಡಂತಹ ಅನುಭವ ವಾಗುತ್ತಿತ್ತು. ಬೆಳಕು ಕಂಡ ನಂತರ ಶಬ್ದ ಕೇಳಿಸುತ್ತದೆನ್ನುವ ವಿಜ್ಞಾನ ಇಣುಕುತ್ತಿತ್ತು. ಅಲ್ಲಿನ ದೀಪಗಳು ಆರಿದ ನಂತರ ಪ್ರಕ್ರಿಯೆ ಮುಗಿಯಿತು ಎನ್ನುವುದು ಅರಿವಿಗೆ ಬಂತು,ಆದರೆ ತಗೆದಿರುವ ಪೊಟೋ ಬಗ್ಗೆ ಕುತೂಹಲವಿತ್ತು. ಛಾಯಗ್ರಾಹಕರನ್ನು ಕೇಳಿದೆ ಒಂದು ದಿನ ತಡವಾಗುತ್ತದೆ ಮರುದಿನ ನಿಮಗೆ ಪ್ರತಿ ದೊರಕುತ್ತದೆ ಎನ್ನುವ ಉತ್ತರವಿತ್ತ ಪರಿಣಾಮ ಆ ಸಮಯ ಬರುವವರೆಗೆ ಮನ ಮಂಗನಂತೆ ತೊಳಲಾಡುತ್ತಿತ್ತು, ಛಾಯಾ ಪ್ರತಿ ಮರುದಿನ ಕೈಗೆ ಸಿಕ್ಕಾಗ ಕಣ್ಣುಗಳು ಮುಚ್ಚಿಯಿರುವ ಅಚ್ಚು ಲಭ್ಯವಾಗಿ ಮತ್ತೊಮ್ಮೆ ಸ್ಟುಡೀಯೊಕ್ಕೆ ತೆರಳುವ ದೌರ್ಭಾಗ್ಯ ಒದಗಿ ಬಂದಿತು, ಈ ಬಾರಿ ಅದೇ ಕೊಠಡಿಯಲ್ಲಿ ಒಳ ಹೊಕ್ಕಾಗ ಎಲ್ಲರ ಮಾರ್ಗದರ್ಶನದ ಮಾತುಗಳೇ ಕಿವಿಯಲ್ಲಿ ರಿಂಗಣಿಸುತ್ತಿದ್ದವು, ಮುಖದಲ್ಲಿ ನಗು ಮರೆಯಾಗಿ ದುಗುಡ, ಆತಂಕ ತೇಲಾಡುತ್ತಿದ್ದವು. ಕೊಂಚ ಸಾವಧಾನವಾಗಿಸಿಕೊಂಡು ದೀಪಗಳು ಹೊತ್ತಿದ ಕೂಡಲೇ ಭಯಗೊಂಡು, ಕಣ್ಣುಗಳನ್ನು ಬಿಗಿಯಿಂದ ತೆರೆದು ಕೆಮರಾಯಿರುವ ದಿಕ್ಕನ್ನ ಬದಲಿಸಿ ಮೇಲಕ್ಕೆ ನೋಡಿದೆ. ಫಕ್ ಎನ್ನುವ ಶಬ್ದ ಹೊರಬಂದಾಗ ಬಿಗಿಯಿಡಿದಿದ್ದ ನಯನಗಳನ್ನು ಮತ್ತು ಉಸಿರನ್ನು ಸಡಿಲಿಸಿದೆ. ಆದರೂ ಅಂತಿಮವಾಗಿ ಪೊಟೋ ಕೈಗೆ ಸಿಕ್ಕಾಗ ಮಾತ್ರ ಅದರ ಹಣೆಬರಹ ಗೊತ್ತಾಗುತ್ತಿತ್ತು ಎಂಬುದು ದಿಟ. ಮರುದಿನ ಅಚ್ಚು ದೊರಕಿತು, ಕತ್ತು ಮೇಲಕ್ಕೆ ಚಾಚಿ, ಕಣ್ಣಿನ ಗುರಿಯು ಸಹ ಗಗನವನ್ನು ನೋಡುತಿತ್ತು. ಎತ್ತರದ ಮರದಿಂದ ಕೆಳಗಿರುವ ಮೇಕೆಯೊಂದು ಹಸಿರನ್ನು ತಿನ್ನುವಂತಹ ದೃಶ್ಯದಂತೆ ಕಾಣುತ್ತಿದ್ದರೂ, ಮುಚ್ಚಿದ ಅಕ್ಷಿಗಿಂತ ಮೇಲಕ್ಕೇರಿದ್ದೆ ವಾಸಿ ಎನ್ನುವ ಮಾತುಗಳು ಮನಕ್ಕೆ ಅಲ್ಪ ಸಮಾಧಾನ ಕೊಟ್ಟವು. ಆಗಿನಿಂದ ಕೆಮರಾ ಕಣ್ಣನ್ನು ನೋಡಲು ಭಯಪಡುವ ನಯನಗಳು ದಿಕ್ಕನ್ನು ಬದಲಿಸುತ್ತವೆ.




ಪ್ರದೀಪ ಎಂ ಬಿ
ಕೊಟ್ಟೂರು

Scan For Digital Colourful
HAMPI TIMES E-paper

ಸ್ವಲ್ಪ ವರ್ಷದ ತರುವಾಯ ಕೆಲವೊಂದು ತಲ್ಲಣಗಳು ಮೈದಳೆದವು, ನಾವೀನ್ಯ ರೀತಿಯ ಕೆಮರಾಗಳು ಮಾರುಕಟ್ಟೆಗೆ ಲಗ್ಗೆಯಿಟ್ಟವು, ಪೋಟೊಗ್ರಾಫರ್ ಗಳ ಸಂಖ್ಯೆ ದುಪ್ಪಾಟ್ಟಾಯಿತು, ಇವರಲ್ಲಿ ಸ್ಪರ್ಧೆ ಏರ್ಪಟ್ಟು, ಉಳ್ಳವರು ಡಿಜಿಟಲೀಕರಣಕ್ಕೇ ಧಾವಿಸಿದ ಪರಿಣಾಮ ನೂತನ ತಂತ್ರಜ್ಞಾನದ ಕೆಮರಾಗಳು, ಕೂಡಲೇ ಪ್ರಿಂಟ್ ಹಾಕುವಂತಹ ಯಂತ್ರಗಳು ಡಾರ್ಕ್ ರೂಮ್ ಆವರಣವನ್ನು ತನ್ನ ತೆಕ್ಕೆಗೆ ತಗೆದುಕೊಂಡವು. ಕತ್ತಲಕೋಣೆಯಲ್ಲಿ ಅಚ್ಚಾಗುತ್ತಿದ್ದ ಛಾಯಾಪ್ರತಿಗಳು, ಇತ್ತೀಚಿಗೆ ತಂತ್ರಜ್ಞಾನದ ಪ್ರಬಾವದಿಂದ ಎಡಿಟ್ ಗಳಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ವದನಕ್ಕೂ ಕೃತಕ ನಗುವನ್ನು ಕೊಟ್ಟು ಬೇಕಾದ ಧಿರಿಸನ್ನು ತೊಡಿಸಿ, ಪೌಡರ್ ಇಲ್ಲದೆ ಮುಖವನ್ನು ಅಲಂಕರಿಸಿ, ಹೆಚ್ಚು ಸಮಯಕ್ಕೂ ಅವಕಾಶ ಕೊಡದೇ ಎಲ್ ಇ ಡಿ ಬಲ್ಬಗಳ ಅಡಿಯಲ್ಲಿ ಮುದ್ರೆಯಾಗುವ ಕಾಲಕ್ಕೆ ಬಂದು ತಲುಪಿದೆವು. ಹಿಂದಿನ ದಿನಮಾನದಲ್ಲಿ ಛಾಯಾಗ್ರಾಹಕ ಪೋಟೋ ಸೆರೆಯಿಡುವಾಗ ಏಕಾಗ್ರತೆ ಮತ್ತು ನೈಪುಣ್ಯತೆ ಕಮರಿ ಹೋಗುವಂತಿರಲಿಲ್ಲ ಆಕಸ್ಮಾತ್ ಕಳೆದರೆ ರೀಲು ನಷ್ಟವಾಗುತ್ತದೆ ಎನ್ನುವ ಭೀತಿ ಇರುತ್ತಿತ್ತು,ಅಂತಹ ಸಂದಿಗ್ದದಲ್ಲೂ ತನ್ನ ಕೈ ಚಳಕವನ್ನು ತೋರುತ್ತಿದ್ದು ಸೋಜಿಗವೇ ಸರಿ. ಹವ್ಯಾಸದಿಂದ ವೃತ್ತಿ ಬದುಕನ್ನು ಕಟ್ಟಿಕೊಂಡವರು ಹಲವರು ಈಗ ಹಲವು ಬಾರಿ ಕ್ಲಿಕ್ ಸಿ ಸರಿಯಾಗಿರುವುದನ್ನು ಆರಿಸುವ ಕಾಲಕ್ಕೆ ತಲುಪಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಮನೆಯಲ್ಲಿರುವವರೆಲ್ಲರೂ ಛಾಯಾಗ್ರಾಹಕರಾಗಿ ಮಾರ್ಪಾಡು ಹೊಂದಿದ್ದೇವೆ. ಕಂಡ ಕಂಡಲ್ಲಿ ಕೆಮರಾ ಕಣ್ಣನ್ನ ತರಯುತ್ತಿದ್ದೇವೆ, ಇದಕ್ಕಾಗಿ ರೈಲಿನ ಬಾಗಿಲಿನಿಂದ ಪಕ್ಕಕ್ಕೆ ಭಾಗಿ, ಹಳಿಯ ಮೇಲೆ ನಡೆಯುತ್ತಾ, ರಭಸವಾಗಿ ಹರಿಯುವ ನದಿಯಲ್ಲಿ ಹಾರಿ ಪ್ರಾಣ ಕಳೆದುಕೊಂಡ ಅಧುನಿಕ ಸೆಲ್ಫಿ ಗ್ರಾಪರ್ ಗಳನ್ನ ಛಾಯಾಗ್ರಾಹಕರ ಸಾಲಿನಲ್ಲಿ ನಿಲ್ಲಿಸಬಹುದಾಗಿದೆ. ವಿಶ್ವ ಛಾಯಾಗ್ರಾಹಕರ ದಿನದ ಈ ಹೊತ್ತಿನಲ್ಲಿ ಮನೆಯ ಗೋಡೆಗೆ ನೇತಾಡುತ್ತಿದ್ದ ಸುಂದರ ಚಿತ್ರವೊಂದು ಸೃಜನಶೀಲ ಛಾಯಾಗ್ರಾಹಕನ ನೆನಪನ್ನು ಸ್ಮೃತಿ ಪಠಲದಿಂದ ನೆನಪಿಸಿತು. ಅವಿಸ್ಮರಣೀಯ ಚಿತ್ರಗಳನ್ನು ಸೆರೆಹಿಡಿಯುವ ಮತ್ತು ಒಂದು ಚಿತ್ರ ಸಾವಿರ ಪದಕ್ಕೆ ಸಮ ಎನ್ನುವಂತೆ, ಪೋಟೋಗಳು ನಮ್ಮೊಳಗಿನ ಭಾವನೆಗಳನ್ನು ಅರಳಿಸುವಂತಹ ಮತ್ತು ಮಧುರವಾದ ಸಂಬಂದಗಳನ್ನು ಬೆಸೆಯುವಂತೆ ಮಾಡುತ್ತವೆ, ಈ ವೃತ್ತಿಯಲ್ಲಿನ ವ್ಯಕ್ತಿಯ ಮನದಲ್ಲಿ ಏನೇ ನೋವಿದ್ದರೂ, ಬಂದಿರುವ ಗ್ರಾಹಕನ ಮುಖದಲ್ಲಿ ನಗು ಬಯಸುವ ಬಹುದೊಡ್ಡ ವ್ಯಕ್ತಿತ್ವವುಳ್ಳ ಮನಸಿನ ಕಾಯಕವಾಗಿದೆ.

# ಸಹೋದರರ ಸವಿ ನೆನಪು ರಕ್ಷಾ ಬಂಧನ

ರಕ್ಷಾ ಬಂಧನವು ಪ್ರೀತಿ ಮತ್ತು ರಕ್ಷಣೆಯ ದಿನವಾಗಿದೆ. ಸಹೋದರ ಮತ್ತು ಸಹೋದರಿಯರ ಬಾಂಧವ್ಯದ ಸಂಕೇತವಾಗಿ ರಾಖಿಯನ್ನು ಕಟ್ಟಲಾಗುತ್ತದೆ. ಶ್ರಾವಣ ಮಾಸದ ಹುಣ್ಣಿಮೆಯಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಸಹೋದರಿಯು ಸಹೋದರನಿಗೆ ಆರತಿ ಬೆಳಗಿ ಹಣೆಗೆ ತಿಲಕವ ಇಟ್ಟು,ಸಹೋದರನ ಕೈಗೆ ರಾಖಿಯನ್ನು ಕಟ್ಟಿ ಅವನ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುತ್ತಾಳೆ. ಸಹೋದರನು ಅವಳಿಗೆ ಸಿಹಿ ತಿನಿಸುವುದರ ಮೂಲಕ ನಿನ್ನ ರಕ್ಷಣೆ ಮಾಡುವೆ ಎಂದು ಸಂಕಲ್ಪ ಮಾಡುತ್ತಾನೆ.ಹೀಗೆ ರಾಖಿ ಹಬ್ಬವನ್ನು ಪ್ರೀತಿ ಕಾಳಜಿಯ ಪ್ರತಿರೂಪವಾಗಿ ಆಚರಿಸಲಾಗುತ್ತದೆ.

ಕೆಲವು ಸಂದರ್ಭದಲ್ಲಿ ಸಹೋದರಿಯು ಸಹೋದರನಿಗೆ ತಾಯಿಯ ಸ್ಥಾನವನ್ನು ತುಂಬುತ್ತಾಳೆ.ಅದಕ್ಕಾಗಿ ಸಹೋದರಿಯನ್ನು ಎರಡನೇ ತಾಯಿ ಎಂದು ಕರೆಯುತ್ತೇವೆ. ಸಹೋದರ ಕೂಡ ತನ್ನ ಅಕ್ಕ ತಂಗಿ ಯರ ಜವಾಬ್ದಾರಿಯನ್ನು ತೆಗೆದುಕೊಂಡು ತಂದೆಯ ರೀತಿ ಪ್ರೀತಿಯಿಂದ ಸಲಹುತ್ತಾನೆ.

ಹಿಂದೂ ಪುರಾಣದ ಪ್ರಕಾರ, ಶ್ರೀ ಕೃಷ್ಣನು ಆಕಸ್ಮಿಕವಾಗಿ ತನ್ನ ಸುದರ್ಶನ ಚಕ್ರದಿಂದ ತೋರುಬೆರಳನ್ನು ಕತ್ತರಿಸಿಕೊಂಡಾಗ ಅವನ ಬೆರಳಿನಿಂದ ರಕ್ತ ಹರಿಯಲು ಆರಂಭವಾಗುತ್ತದೆ. ರಕ್ತವನ್ನು ನಿಲ್ಲಿಸಲು ದ್ರೌಪದಿಯು ತನ್ನ ಸೀರೆಯ ಅಂಚನ್ನು ಹರಿದು ಶ್ರೀ ಕೃಷ್ಣನ ಬೆರಳಿಗೆ ಕಟ್ಟುತ್ತಾಳೆ.ಇದು ಸಹೋದರಿಯ ಪ್ರೀತಿ ಕಾಳಜಿಗೆ ಸಾಕ್ಷಿ ಯಾಗುತ್ತದೆ. ಆ ಬಟ್ಟೆಯನ್ನು ಪವಿತ್ರ ದಾರವೆಂದು ಪರಿಗಣಿಸಲಾಗುತ್ತದೆ.ಆ ದಿನದಿಂದ ಶ್ರೀ ಕೃಷ್ಣನು ಯಾವುದೇ ಸಂದರ್ಭದಲ್ಲಿ ದ್ರೌಪದಿಯನ್ನು ರಕ್ಷಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅದರಂತೆ ದ್ರೌಪದಿ ವಸ್ತ್ರಾಪಹರಣ ಸಮಯದಲ್ಲಿ ಅವಳ ರಕ್ಷಣೆ ಮಾಡುತ್ತಾನೆ. ಅಂದಿನಿಂದ ಇಂದಿನ ವರೆಗೂ ರಕ್ಷಾ ಬಂಧನವನ್ನು ಆಚರಿಸಿಕೊಂಡು ಬರಲಾಗಿದೆ ಎಂಬ ಪ್ರತೀತಿ ಇದೆ.

ನಾನು ಮತ್ತು ನನ್ನ ಸಹೋದರ ಇಬ್ಬರೂ ಬಾಲ್ಯದಲ್ಲಿ ಜೊತೆಯಾಗಿ ಶಾಲೆಗೆ ಹೋಗುತ್ತಿದ್ದೆವು. ಮಲೆನಾಡಿನ ಅಬ್ಬರದ ಮಳೆಯಲ್ಲಿ ಇಬ್ಬರೂ ಕೊಡೆ ಹಿಡಿದು ಮೈ ಒದ್ದೆ ಮಾಡಿಕೊಂಡು ನೀರಿನಲ್ಲಿ ಆಟವಾಡುತ್ತಾ ಮನೆಗೆ ಬರುತ್ತಿದ್ದ ದೃಶ್ಯ ಇನ್ನೂ ನನ್ನ ಸ್ಮೃತಿಪಟದಲ್ಲಿ ಅಚ್ಚಳಿಯದಂತಿದೆ . ನಮ್ಮದು ಚೌಕಿ ಮನೆಯಾದ್ದರಿಂದ ಮಳೆಗಾಲದ ಸಂದರ್ಭದಲ್ಲಿ ಇಬ್ಬರೂ ಅಂಗಳದಲ್ಲಿ ಕಾಗದದ ದೋಣಿ ಮಾಡಿ ಹರಿಯಲು ಬಿಟ್ಟು ಸಂಭ್ರಮಿಸುತ್ತಿದ್ದೆವು. ಹಾಗೆಯೇ ಇಬ್ಬರೂ ಆಗಾಗ ಕಿತ್ತಾಡುತ್ತಾ ಕೂಡ ಇರುತ್ತಿದ್ದೆವು.

ರಜಾದಿನಗಳಲ್ಲಿ ಇಬ್ಬರೂ ಜೊತೆಯಾಗಿ ತೋಟ ಗುಡ್ಡ ಬೆಟ್ಟಗಳನ್ನು ಸುತ್ತಾಡುತ್ತಿದ್ದೆವು. ಅಲ್ಲಿ ಸಿಗುವ ಖರ್ಜಿ ಪೇರಳೆ ಪನ್ನೇರಳೆ ಬೆಂಬರಲೆ ಮುಂತಾದ ಹಣ್ಣುಗಳನ್ನು ನನ್ನ ತಮ್ಮ ಕಿತ್ತುಕೊಡುತ್ತಿದ್ದನ್ನು ನಂತರ ಇಬ್ಬರೂ ಸೇರಿ ಹಂಚಿಕೊಂಡು ತಿನ್ನುತ್ತಿದ್ದೆವು. ಕಲ್ಲು ಮುಳ್ಳು ಚುಚ್ಚಿ ನನಗೆ ನೋವಾದರೆ ನಾನು ಚುಚ್ಚುಮದ್ದು ತೆಗೆದುಕೊಂಡ ಸಂದರ್ಭದಲ್ಲಿ ಅವನ ಕಣ್ಣು ತೇವವಾಗಿರುತ್ತಿತ್ತು. ನಾವು ಜೊತೆ ಯಾಗಿ ಕಳೆದ ಬಾಲ್ಯವನ್ನು ನೆನೆಸಿ ಕೊಂಡರೆ ರೋಮಾಂಚನ ವಾಗುತ್ತದೆ. ಕಾಲೇಜು ದಿನಗಳಲ್ಲಿ ನನ್ನ ಭಾವನೆ ಗಳನ್ನು ಹಚ್ಚಿಕೊಳ್ಳುವ ಆತ್ಮೀಯ ಸ್ನೇಹಿತನಾಗಿದ್ದ. ಆ ಸಂದರ್ಭದಲ್ಲಿ ಎದುರಾಗುತ್ತಿದ್ದ ಚಿಕ್ಕ ಪುಟ್ಟ ಸಮಸ್ಯೆಗಳನ್ನು ನನಗೆ ಅರಿವಿಗೇ ಬರದ ರೀತಿಯಲ್ಲಿ ಬಗೆಹರಿಸುತ್ತಿದ್ದನು. ಸದಾ ನಾನು ನಿನ್ನೊಂದಿಗೆ ಇರುವೆ ಎಂಬ ಭರವಸೆಯೇ ನಮಗೆ ಸಹೋದರರು ತುಂಬುವ ಆತ್ಮವಿಶ್ವಾಸ ಅಲ್ಲವೇ..




ಚೇತನ ಭಾರ್ಗವ
ಲೇಖಕಿ

Scan For Digital Colourful
HAMPI TIMES E-paper

ನನ್ನ ಮದುವೆಯ ಸಂದರ್ಭದಲ್ಲಿ ಅವನು ಓದುವಹುಡುಗನಾಗಿದ್ದರೂ ತಂದೆಯ ಜವಾಬ್ದಾರಿಯ ಅರ್ಧ ಭಾಗವನ್ನು ತೆಗೆದುಕೊಂಡು ಕರೆಯೋಲೆಗಳನ್ನು ವಿತರಿಸುವ, ನೆಂಟರಿಷ್ಟರ ಯೋಗಕ್ಷೇಮ ವಿಚಾರಿಸುತ್ತಾ, ಅವರು ತಂಗಲು ವ್ಯವಸ್ಥೆ ಮಾಡುತ್ತಾ ಸಂಭ್ರಮದಿಂದ ಅಪ್ಪ ಅಮ್ಮನ ಜೊತೆಗೂಡಿ ಎಲ್ಲರೂ ಸೇರಿ ವಿಜೃಂಭಣೆಯಿಂದ ನೆರವೇರಿಸಿಕೊಟ್ಟರು. ನನ್ನ ನಿಶ್ಚಿತಾರ್ಥ ಸಮಯದಲ್ಲಿ ಹಿಂದಿನ ದಿನ ಪೂರ್ತಿ ಕಾರ್ಯಕ್ರಮಕ್ಕೆ ತಯಾರಿ ನಡೆಸಿದ್ದರಿಂದ ಆ ದಿನ ಅವನಿಗೆ ಆರೋಗ್ಯ ಸರಿಯಿರಲಿಲ್ಲ ಆದರೂ ಅದನ್ನುತೋರಿಸಿಕೊಳ್ಳದೆಸಮಾರಂಭದಲ್ಲಿನಗುನಗುತ್ತಾಓಡಾಡಿಕೊಂಡಿದ್ದನು.

ನನಗೆ ಮಗಳು ಹುಟ್ಟಿದ ಸುದ್ದಿ ಕೇಳಿದೊಡನೆ ದೂರದ ಊರಿನಿಂದ ಕಾಲೇಜಿಗೆ ರಜೆ ಹಾಕಿ ನೋಡಲು ಓಡಿ ಬಂದಿದ್ದ. ಅವಳ ಮೊದಲ ಫೋಟೋ ವನ್ನು ಅವನೇ ತೆಗೆದದ್ದು. ಅವಳ ಹುಟ್ಟಿದ ದಿನವನ್ನು ನಾವೆಲ್ಲಾ ಸೇರಿ ಹಬ್ಬದ ರೀತಿ ಆಚರಿಸುತ್ತಿದ್ದೆವು ಅದರಲ್ಲಿ ಮನೆಯನ್ನು ಅಲಂಕರಿಸುವಾಗ ಅವನ ಪಾತ್ರ ಹೆಚ್ಚಿರುತ್ತಿತ್ತು. ನನ್ನ ಮಗಳ ಆಟ ಪಾಠಗಳನ್ನು ನೋಡಿ ಅವನು ಹೆಚ್ಚು ಸಂಭ್ರಮಿಸಿದ್ದಾನೆ. ಅದಕ್ಕೆ ನಾಮಕರಣದಿಂದ ಹಿಡಿದು ಮದುವೆಯ ವರೆಗೂ ಸೋದರ ಮಾವನ ಪಾತ್ರ ಶಾಸ್ತ್ರಗಳಲ್ಲಿ ಹಿರಿದಾಗಿದೆ.

ಅವನ ಮದುವೆಗೆ ಒಂದು ತಿಂಗಳು ಇರುವ ಮುಂಚೆಯಿಂದಲೇ ನನ್ನ ತಯಾರಿ ಶುರುವಾಗಿತ್ತು. ಕನ್ನಡಿ ಕಲಶ(ಕಲಶಗಿತ್ತಿ) ಹಿಡಿಯಲು ನನಗೆ ಸಂಭ್ರಮ. ಮದುಮಗಳ ರೀತಿ ಅಲಂಕಾರ ಮಾಡಿಕೊಂಡು ನನ್ನ ಮಗಳೊಡನೆ ಮೂರು ದಿನ ಪೂರ್ತಿ ಸಂಭ್ರಮಿಸಿದ್ದೆವು.ಅವನಿಗೆ ಮೊದಲ ಮಗು ಜನಿಸಿದ ಸಂದರ್ಭದಲ್ಲಿ ನನಗೆ ಆರೋಗ್ಯ ಸರಿಯಿಲ್ಲದೆ ಆಸ್ಪತ್ರೆ ಸೇರಿದ್ದೆ. ಅವನು ತಾನು ಸಂತೋಷ ಪಡಬೇಕಿದ್ದ ಕ್ಷಣಗಳನ್ನು ಮರೆಮಾಚಿಕೊಂಡು ನನ್ನ ದುಃಖಕ್ಕೆ ದನಿಯಾಗಿದ್ದ. ಆ ಸಮಯದಲ್ಲಿ ನನಗೆ ಧೈರ್ಯ ತುಂಬಿ ಸಮಾಧಾನಿಸುತ್ತಾ ನನ್ನ ನೋವಿನಲ್ಲಿ ಪಾಲುದಾರನಾಗಿದ್ದ. ಅವನು ಸ್ಪಂದಿಸಿದ ರೀತಿ ನೋಡಿ ಹೆಣ್ಣಿನ ಜನುಮಕೆ ಅಣ್ಣ ತಮ್ಮರು ಬೇಕು ಎಂಬ ಜಾನಪದ ಗೀತೆಯ ಸಾಲುಗಳು ಎಷ್ಟು ಅರ್ಥಗರ್ಭಿತ ಎಂದು ಅನಿಸಿತು. ನನ್ನ ತಮ್ಮನ ಮಕ್ಕಳು, ನನ್ನ ತವರನ್ನು ಬೆಳಗುವ ದೀಪಗಳು ಅವರು ನನ್ನ ಅಕ್ಕರೆಯ ಮುದ್ದುಮಣಿಗಳು.

ಒಂದೇ ಕರುಳಿನ ಬಳ್ಳಿಗಳು ನಾವು ಆದರೂ ಕೂಡ ಮನುಷ್ಯ ಎಂದ ಮೇಲೆ ಅಭಿಪ್ರಾಯಗಳು ಬೇರೆಯಾಗಿ ಭಿನ್ನಾಭಿಪ್ರಾಯ ಬಂದಿರಬಹುದು ಅದು ಕ್ಷಣಿಕ.ಪ್ರೀತಿ ವಾತ್ಸಲ್ಯ ಮಮತೆ ಕಾಳಜಿ ರಕ್ಷಣಾ ಮನೋಭಾವ ಮಾತ್ರ ಉಳಿಯುವುದು ಎಂದೆಂದೂ ಶಾಶ್ವತ.

ನನ್ನ ತಮ್ಮ, ನನ್ನ ಕಷ್ಟಕ್ಕೆ ಹೆಗಲುಕೊಟ್ಟು, ಸಂತೋಷಕ್ಕೆ ಭಾಗಿಯಾದ ಪರಿ ಮನೋಜ್ಞ. ಅವನಿಗೆ ಭಗವಂತ ಸುಖ, ಶಾಂತಿ, ನೆಮ್ಮದಿ ,ಆರೋಗ್ಯ, ಆಯಸ್ಸು ಸಕಲ ಅಷ್ಟೈಶ್ವರ್ಯ ಕೊಟ್ಟ ಅವನ ಇಷ್ಟಾರ್ಥವೆಲ್ಲಾ ನೆರವೇರಲಿ ಎಂದು ಪ್ರಾರ್ಥಿಸುತ್ತೇನೆ. ರಕ್ತಸಂಬಂಧದ ಸಹೋದರನೊಂದಿಗೆ ಮಾತ್ರ ರಾಖಿ ಕಟ್ಟುವ ಮೂಲಕ ಹಬ್ಬವನ್ನು ಆಚರಿಸಬೇಕೆಂದಿಲ್ಲ ನಮ್ಮನ್ನು ಕಾಳಜಿ ಮಾಡುವ, ಪ್ರೀತಿಸುವ, ಸಹೋದರಿ ಎಂದು ತಿಳಿದು ಆದರಿಸುವ ಎಲ್ಲಾ ಸಹೋದರ ರಿಗೂ ರಾಖಿ ಕಟ್ಟಿ ರಕ್ಷಾಬಂಧನವನ್ನು ಸಂಭ್ರಮಿಸಬಹುದು.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**20–08–2024 – ಮಂಗಳವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಭಿಷ |
| ಯೋಗ | : ಅತಿಗಂಡ |
| ಕರಣ | : ಬಾಳವ |
| ಸೂರ್ಯೋದಯ | : 06:06:16 |
| ಸೂರ್ಯಾಸ್ತ | : 18:53:49 |
| ರಾಹು ಕಾಲ | : 15:42–17:18 |
| ಯಮಘಂಡ ಕಾಲ | : 09:18–10:54 |
| ಗುಳಿಕ ಕಾಲ | : 12:30–14:06 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 19–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.58 ಅಡಿ |
| ಒಳ ಹರಿವು | 55275 ಕ್ಯುಸೆಕ್ |
| ಹೊರ ಹರಿವು | 10275 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 75.128 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1627.78 ಅಡಿ |
| ಒಳ ಹರಿವು | 587 ಕ್ಯುಸೆಕ್ |
| ಹೊರ ಹರಿವು | 9947 ಕ್ಯುಸೆಕ್ |
| ಸಾಮರ್ಥ್ಯ | 83.927 ಟಿಎಂಸಿ |

# ಕುಡಿತ ಬಿಟ್ಟವರು ನೆಮ್ಮದಿ ಬದುಕು ಕಟ್ಟಿಕೊಂಡಿದ್ದಾರೆ

### ಡೋಣೂರು ಚಾನುಕೋಟೆ ಮಠದ ಡಾ.ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**
ವೀರೇಂದ್ರ ಹೆಗಡೆಯವರ ಮಾರ್ಗದರ್ಶನದಲ್ಲಿ ನಡೆಯುವ ಮದ್ಯವರ್ಜನ ಶಿಬಿರ ರಾಜ್ಯದಲ್ಲಿ ಎಷ್ಟೋ ಕುಟುಂಬಗಳಿಗೆ ಬೆಳಕಾಗಿದೆ, ಇಂದಿನ ಶಿಬಿರಾರ್ಥಿಗಳು ಕುಡಿತವನ್ನು ಬಿಟ್ಟು ಒಳ್ಳೆಯ ಜೀವನವನ್ನು ಕಂಡುಕೊಳ್ಳಬೇಕೆಂದು ಡೋಣೂರು ಚಾನುಕೋಟೆ ಮಠದ ಡಾ.ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಶ್ರೀ ಮರುಳಸಿದ್ದೇಶ್ವರ ಸಭಾ ಭವನದಲ್ಲಿ ಸೋಮವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಕೊಟ್ಟೂರು ಮತ್ತು ಸಮುದಾಯ ಆರೋಗ್ಯ ಕೇಂದ್ರ ,ಪಟ್ಟಣ ಪಂಚಾಯಿತಿ, ಆರಕ್ಷಕ ಠಾಣೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನಡೆದ 1841ನೇ ಮದ್ಯವರ್ಜನ ಶಿಬಿರದಲ್ಲಿ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಮದ್ಯದ ದುಶ್ಚಟದಿಂದಾಗಿ ಅನೇಕ ಕುಟುಂಬಗಳು ನೆಮ್ಮದಿ ಕಳೆದುಕೊಂಡಿವೆ. ಕುಡಿತ ತ್ಯಜಿಸಿದರೆ ಮಕ್ಕಳ ಶಿಕ್ಷಣ ಪ್ರಗತಿ ಕಾಣಬಹುದಾಗಿದೆ. ದುಡಿಮೆ ಮದ್ಯದಂಗಡಿಗಳಿಗೆ ಸುರಿಯುವದಕ್ಕಿಂತ ಮಕ್ಕಳ ಶಿಕ್ಷಣಕ್ಕೆ ಸುರಿದರೆ ಮಕ್ಕಳು ಭವಿಷ್ಯದಲ್ಲಿ ಉನ್ನತ ಸ್ಥಾನಮಾನಗಳೊಂದಿಗೆ ದೇಶಕ್ಕೆ ಉತ್ತಮ ಕೊಡುಗೆ ನಿಡಬಲ್ಲವರಾಗುತ್ತಾರೆ ಎಂದರು.

ಜನಜಾಗೃತಿ ವೇದಿಕೆಯ ಕೊಪ್ಪಳ ಪ್ರಾದೇಶಿಕ ಕಚೇರಿಯ ಯೋಜನಾಧಿಕಾರಿ ನಾಗೇಶ್ ಮಾತನಾಡಿ, ಕುಡಿತಕ್ಕೆ ದಾಸರಾಗಿರುವ ವ್ಯಕ್ತಿಗಳ ಮನೆಯ ಕುಟುಂಬಗಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದರು ಮದ್ಯವರ್ಜನ ಶಿಬಿರಕ್ಕೆ ಸೇರಿ ರಾಜ್ಯದಲ್ಲಿ 1 ಲಕ್ಷಕ್ಕೂ ಹೆಚ್ಚಿನ ಶಿಬಿರಾರ್ಥಿಗಳು ಕುಡಿತವನ್ನು ಬಿಟ್ಟು , ಉತ್ತಮ ಬದುಕು ಕಟ್ಟಿಕೊಳ್ಳುವ ಮೂಲಕ ಅವರ ಕುಟುಂಬಗಳು ಸರ್ವ ರೀತಿಯಿಂದಲೂ ಅಭಿವೃದ್ಧಿ ಕಂಡುಕೊಂಡಿವೆ ಎಂದು ಹೇಳಿದರು.

ವಿಜಯನಗರ ಜಿಲ್ಲೆಯ ಜಿಲ್ಲಾ ನಿರ್ದೇಶಕರು ಸತೀಶ್ ಶೆಟ್ಟಿ ಮಾತನಾಡಿ, ಈ ಶಿಬಿರ ಯಶಸ್ವಿಗೊಳಿಸಲು ಊರಿನ ಮುಖಂಡರ ಸಹಕಾರ ಬಹುಮುಖ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರು ಮೈದೂರ್ ಶಿವಣ್ಣ, ಗೌರವಾಧ್ಯಕ್ಷರು ದೊಡ್ಡರಾಮಣ್ಣ, ಕೊಟ್ಟೂರೇಶ್ವರ ದೇವಸ್ಥಾನದ ಧರ್ಮಕರ್ತರು ಶೇಖರಯ್ಯ, ಭಾರತಿ ಸುಧಾಕರ್ ಪಾಟೀಲ್ ಪಪಂ ಸದಸ್ಯರು, ದೇವರ ಮನೆ ಕೊಟ್ರೇಶ್. ಮರಿಸ್ವಾಮಿ, ವಿವೇಕಾನಂದ, ಡಾಕ್ಟರ್ ತಿಪ್ಪೇಸ್ವಾಮಿ ವೆಂಕಟೇಶ್, ಭರಮಪ್ಪ. ಜನಜಾಗೃತಿ ವೇದಿಕೆಯ ಸದಸ್ಯರು ರೇವಣಸಿದ್ದಪ್ಪ, ಮಲ್ಲಿಕಾರ್ಜುನ್, ಎ. ಸಿ.ಚನ್ನಬಸಪ್ಪ, ಉಪಾಧ್ಯಕ್ಷರು ಶಿಲ್ಪಾಕಲಾ, ರೂಪ, ನೇತ್ರಾವತಿ, ಮರಬ ಶಿವಣ್ಣ, ಕೋಶಾಧಿಕಾರಿ ಚನ್ನಪ್ಪ, ಕ್ಷೇತ್ರ ಯೋಜನಾಧಿಕಾರಿಗಳಾದ ನವೀನ್ ಕುಮಾರ್ ಹೆಚ್. ಡಿ. ಉಪಸ್ಥಿತರಿದ್ದರು.

ಈ ವೇಳೆ ಕೊಟ್ಟೂರು ವಲಯ ಮೇಲ್ವಿಚಾರಕರು ರುದ್ರೇಶ್, ಜಗದೀಶ್, ಸಾವಿತ್ರಿ ಸದ್ದಾಮ್,ಸೌಮ್ಯ ಮತ್ತು ತೊಟ್ಟಿಲು ಮಠ, ಕೊಟ್ಟೂರು ಸಿರಿಮಠ ಎಲ್ಲಾ ಸೇವಾ ಪ್ರತಿನಿಧಿಗಳು ಹಾಜರಿದ್ದರು.

## ಮಕ್ಕಳಿಗೆ ಶಿಕ್ಷಣ ಕೊಡಿಸಿ

**ಮೊದಲ ಪುಟದಿಂದ**
ಕನಕಗುರು ಪೀಠದ ಶಾಖಾ ಮಠದ ಹೊಸದುರ್ಗದ ಶ್ರೀಈಶ್ವರನಂದ ಸ್ವಾಮಿ ಮಾತನಾಡಿ, ನಮ್ಮವರು ದುಂದು ವೆಚ್ಚದ ಮೂಲಕ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಐದು ವರ್ಷಕ್ಕೊಮ್ಮೆ ಮಾಡುವ ದೇವತೆಗಳ ಹಬ್ಬವನ್ನು 10, 15 ವರ್ಷಕ್ಕೊಮ್ಮೆ ಹಬ್ಬ ಮಾಡಿ. ದೇವತೆಗಳೇನು ಸಿಟ್ಟಾಗುವುದಿಲ್ಲ.

ಆರ್ಥಿಕವಾಗಿ ಸದೃಢವಾದರೆ ನಿಮ್ಮ ಮಕ್ಕಳು ಉನ್ನತ ಶಿಕ್ಷಣ ಪಡೆದು ಅಧಿಕಾರಿಗಳಾಗುತ್ತಾರೆ ಎಂಬುದನ್ನು ಮರೆಯಬೇಡಿ ಎಂದರು.

ನಮ್ಮ ಸಮಾಜದ ದೇವಾಲಯಗಳನ್ನು ಕಟ್ಟಿದರೆ ವಿನಾ, ಶಿಕ್ಷಣ ಸಂಸ್ಥೆಗಳನ್ನು ಕಟ್ಟಲಿಲ್ಲ. ದೇವಾಲಯಕ್ಕೂ ಹೋದರೆ ಭಕ್ತಿ ಪ್ರಾಪ್ತಿಯಾಗುತ್ತದೆ. ವಿದ್ಯಾಲಯಕ್ಕೆ ಜ್ಞಾನ ಪ್ರಾಪ್ತಿಯಾಗುತ್ತದೆ ಹಿಂದುಳಿದ ವರ್ಗಗಳು ಈ ಎರಡನ್ನು ಕಟ್ಟಬೇಕೆಲ್ಲದೆ ಶಿಕ್ಷಣಕ್ಕೆ ಹೆಚ್ಚು ಮಹತ್ವಕೊಡಬೇಕು ಎಂದರು.

ರೇವಯ್ಯ ಒಡೆಯರ್ ಸ್ವಾಗತಿಸಿದರು. ಸಮಾಜದ ಪ್ರಮುಖರಾದ ಪೂಜಾರ್ ನಾಗಪ್ಪ, ಮುಪ್ಪಜ್ಜ, ಕೃಷ್ಣ, ರಾಮಣ್ಣ ಎಚ್. ಚೌಟಗಿ ಕೊಟ್ರೇಶಪ್ಪ, ಪಿ.ಡಿ.ಓ ಕೆಂಚಪ್ಪ, ಮಾನಸ ನಾಗರಾಜ್, ಟಿ. ರಾಮಣ್ಣ, ಹಳ್ಳಿ ಸುರೇಶ, ಭರಮಪ್ಪ, ನಂಜಪ್ಪ, ಮೂಗಪ್ಪ, ಕೆಂಚಲಿಂಗಪ್ಪ, ಜಲಪೂರ್, ಮರಿಯಪ್ಪ, ಚೌಟಗಿ ಮಂಜು, ಜೆ.ಸಿ.ಬಿ. ಅಜ್ಜಯ್ಯ, ಭಂಡಾರಿ ರವಿ, ಬಿ. ಸಿದ್ದೇಶ, ಬಸಪ್ಪ ಮುಂತಾದವರಿದ್ದರು.

ಇದಕ್ಕೂ ಮೊದಲು ಉಭಯ ಸ್ವಾಮಿಗಳನ್ನು ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಕೊಟ್ಟೂರು ದೇವರು ಮತ್ತು ಪೌರಾಹಿತರಾದ ಕೋಣನಹಳ್ಳಿ ಪ್ರಕಾಶ, ವಿರೂಪಾಕ್ಷಪ್ಪ ಮಂಗನಹಳ್ಳಿ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿದರು.

## ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಮೊದಲ ಪುಟದಿಂದ**
ಮೊತ್ತದ ಶೇ12% ರಷ್ಟು ಮೊತ್ತವನ್ನು ಆನ್‌ಲೈನ್ ಮುಖಾಂತರ ಅಥವಾ ಜಿಲ್ಲಾ ಕಚೇರಿಯಲ್ಲಿ ಪಾವತಿಸಬೇಕು.

ಈ ಹಿಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗಿದ್ದ ಬೇರೆ ಬೇರೆ ವರ್ಷಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅರಿವು ವಿದ್ಯಾಭ್ಯಾಸ ಸಾಲ ಪಡೆಯದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು, ರಿನ್ಯೂವಲ್ ಮೊತ್ತವನ್ನು ಪಾವತಿಸುವುದು ಆಗತ್ಯಾವಿರುವುದಿಲ್ಲ. ವಿದ್ಯಾರ್ಥಿಗಳು https://kmdconline.karnataka.gov.in/ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆಯ ತಾಲೂಕು ಕಚೇರಿ ಆವರಣದಲ್ಲಿರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಭೇಟಿ ನೀಡಿ ಎಂದು ಪ್ರಕಟಣೆ ತಿಳಿಸಿದೆ.

## 50 ಲಕ್ಷ ರೂ ಲಾಭ, ಷೇರುದಾರರಿಗೆ ಶೇ.10 ಡಿವಿಡೆಂಡ್

### ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ಅಧ್ಯಕ್ಷ ಜಿ.ಭರಮಪ್ಪ ಘೋಷಣೆ



■ **ಹಂಪಿ ಟೈಮ್ಸ್ ಹೊಸಪೇಟೆ**
ಸಂಘದ ಸಾಲ ಠೇವಣಿಯ ಅನುಪಾತ 70 ರಷ್ಟಿದ್ದು ಸಧೃಡವಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ. 50 ಲಕ್ಷ ಲಾಭ ಗಳಿಸಿದೆ. ಷೇರುದಾರರಿಗೆ ಶೇ.10 ಡಿವಿಡೆಂಡ್ ನೀಡಲಾಗುವುದು ಎಂದು ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ಅಧ್ಯಕ್ಷ ಜಿ.ಭರಮಪ್ಪ ಘೋಷಿಸಿದರು.

ನಗರದ ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದಿಂದ ಶನಿವಾರ ನಗರದ ರೋಟರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 2023–24 ನೇ ಸಾಲಿನ 8ನೇ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಸಹಕಾರಿಗಳು, ಸಿಬ್ಬಂದಿ ಹಾಗೂ ನಿರ್ದೇಶಕರ ಸಹಕಾರಿಂದ ಸಂಘ ಪ್ರಗತಿಯ ಹೆಜ್ಜೆ ಹಾಕುತ್ತಿದೆ ಎಂದರು.

ಸಂಘದ ಉಪಾಧ್ಯಕ್ಷ ಬಿ.ಎಂ.ಪ್ರಭುದೇವ ಪ್ರಾಸ್ತಾವಿಕ ಮಾತನಾಡಿ, ಕರ್ನಾಟಕ ಸರಕಾರವು ಈಗಿರುವ ಸೌಹಾರ್ದ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರಲು ಉದ್ದೇಶಿಸಿದ್ದು, ಇದರಿಂದ ಸಹಕಾರಿಗಳ ವ್ಯವಹಾರದಲ್ಲಿ ಸರಕಾರದ ಹಸ್ತಕ್ಷೇಪವಾಗಿ ಆಡಳಿತದಲ್ಲಿ ಅಪಾಯಗಳು ಸಂಭವಿಸ ಬಹುದು ಎಂದರು.

ವಿಕಾಸ ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಹಿರೇಮಠ ಮಾತನಾಡಿ, ಸೌಹಾರ್ದಗಳು ಸಿಬ್ಬಂದಿ ಸಮಸ್ಯೆಯನ್ನು ಮತ್ತು ಒಂದು ವೇಳೆ ಕಾಯ್ದೆಗೆ ತಿದ್ದುಪಡಿ ಬಂದರೆ ಆಡಳಿತಾತ್ಮಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕರಾದ ಎಚ್.ಎಂ.ಸಣ್ಣ ಸಿದ್ದಯ್ಯ ವಾರ್ಷಿಕ ವರದಿಯನ್ನು ಮಂಡಿಸಿ, ಸಂಘವು ರೂ.2 ಕೋಟಿ ಷೇರು ಬಂಡವಾಳವನ್ನು, ರೂ.68 ಲಕ್ಷ ನಿಧಿಗಳನ್ನು, ರೂ.30 ಕೋಟಿ ಠೇವಣಿ ಸಂಗ್ರಹಿಸಿದೆ. ರೂ.22 ಕೋಟಿ ಸಾಲಗಳನ್ನು ನೀಡಿದ್ದು, ರೂ.50 ಲಕ್ಷ ಲಾಭಗಳಿಸಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಸಂಯುಕ್ತ ಸಹಕಾರಿ ಜಿಲ್ಲಾ ಸಂಯೋಜಕ ರವಿಕುಮಾರ್ ಮತ್ತು ಸಂಘದ ನಿರ್ದೇಶಕರು, ಸಿಬ್ಬಂದಿ ವರ್ಗದವರು, ಷೇರುದಾರರು ಭಾಗವಹಿಸಿದ್ದರು.

## ಕಾರ್ಮಿಕರಿಗೆ ತಲಾ 50 ಸಾವಿರ ರೂ. ಬಹುಮಾನ

### ಸ್ಟಾಪ್‌ಲಾಗ್ ಯಶಸ್ವಿ। ಕೊಟ್ಟ ಮಾತಿನಂತೆ ನಡೆದ ಸಚಿವ ಜಮೀರ್ । ಕಾರ್ಮಿಕರಿಗೆ ಸನ್ಮಾನ



■ **ಹಂಪಿ ಟೈಮ್ಸ್ ಹೊಸಪೇಟೆ:**
ತುಂಗಭದ್ರ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಳಚಿದ ಜಾಗದಲ್ಲಿ ಸ್ಟಾಪ್ ಲಾಗ್ ಎಲಿಮೆಂಟ್ ಜೋಡಣೆಯನ್ನು ಯಶಸ್ವಿಗೊಳಿಸಿದ ತಂತ್ರಜ್ಞರು ಹಾಗೂ ಕಾರ್ಮಿಕರನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಪರವಾಗಿ ಟಿಬಿ ಡ್ಯಾಂ ಕಚೇರಿ ಆವರಣದಲ್ಲಿ ಭಾನುವಾರ ಸನ್ಮಾನಿಸಿ, 20 ಜನ ಪ್ರಮುಖ ಕಾರ್ಮಿಕರಿಗೆ ತಲಾ 50 ಸಾವಿರ ರೂ. ವಿತರಿಸಲಾಯಿತು.

ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಜಮೀರ್ ಖಾನ್ ವೈಯಕ್ತಿಕವಾಗಿ ಹಣ ಕಳುಹಿಸಿಕೊಟ್ಟು, ಡ್ಯಾಂ ಸ್ಟಾಪ್ ಲಾಗ್ ಅಳವಡಿಕೆಯಲ್ಲಿ ತೊಡಗಿದ್ದ ಕಾರ್ಮಿಕರಿಗೆ ಕೊಟ್ಟ ಭರವಸೆಯನ್ನು ಸಚಿವರು ಈಡೇರಿಸಿದ್ದಾರೆ.

ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಮಾತನಾಡಿ, ಡ್ಯಾಂನ 19ನೇ ಗೇಟ್‌ನ ಸ್ಟಾಪ್ ಗೇಟ್ ನಿರ್ಮಾಣ ಕಾರ್ಯದಲ್ಲಿ ತೊಡಗಿದ ಕಾರ್ಮಿಕರನ್ನು ಪ್ರೋತ್ಸಾಹಿಸಲು ಸಚಿವ ಜಮೀರ್ ಅಹ್ಮದ್ ಖಾನ್ ತಲಾ 50 ಸಾವಿರ ರೂ. ನೀಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಕಾರ್ಮಿಕರು ಹಗಲಿರುಳು ಶ್ರಮಿಸಿ, ಸ್ಟಾಪ್ ಲಾಗ್ ಅಳವಡಿಕೆಯನ್ನು ಯಶಸ್ವಿಗೊಳಿಸಿದ್ದಾರೆ. ಅವರ ಪರಿಶ್ರಮದಿಂದ ಜಲಾಶಯದ ಅಚ್ಚುಕಟ್ಟು ರೈತರ ಲಕ್ಷಾಂತ ಹೆಕ್ಟರ್ ಜಮೀನಿಗೆ ನೀರು ದೊರೆಯಲಿದೆ. ಅಂತಹ ಶ್ರಮ ಜೀವಿಗಳನ್ನು ಸನ್ಮಾನಿಸುವ ಸಚಿವರ ಕಾರ್ಯ ಅಭಿನಂದನಾರ್ಹ. ಸಚಿವರ ಸೂಚನೆಯ ಮೇರೆಗೆ ಕಾರ್ಯ ಕ್ರಮದ ಜವಾಬ್ದಾರಿ ವಹಿಸಿರುವೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮಾತನಾಡಿ, ಅಣೆಕಟ್ಟೆಗೆ ಸ್ಟಾಪ್ ಲಾಗ್ ಅಳವಡಿಕೆಗೆ ಶ್ರಮಿಸಿದ ಕಾರ್ಮಿಕರನ್ನು ಗೌರವಿಸುವ ದೊಡ್ಡ ಗುಣ ಜಮೀರ್ ಅಹಮದ್ ಖಾನ್ ಅವರದು. ನಾಲ್ಕು ಜಿಲ್ಲೆಯ ರೈತರ ಆತಂಕ ಇಂದು ದೂರವಾಗಿದೆ. ಇತಿಹಾಸದಲ್ಲಿ ಇದೊಂದು ಅಪೂರ್ವ ದಿನವಾಗಲಿದೆ. ಸ್ಟಾಪ್ ಗೇಟ್ ಯಶಸ್ವಿ ಅಳವಡಿಕೆ ಮೂಲಕ ಇಡೀ ದೇಶಕ್ಕೆ ಸಂದೇಶ ರವಾನಿಸಿದ್ದಾರೆ. ಇನ್ಮುಂದೆ ಎಲ್ಲೇ ಸಮಸ್ಯೆಯಾದರೂ, ಹೊಸಪೇಟೆಯ ತಂತ್ರಜ್ಞರನ್ನು ಕರೆಸಿಕೊಳ್ಳುತ್ತಾರೆ. ಕನ್ನಯ್ಯ ನಾಯ್ಡು ನೇತೃತ್ವದ ತಂಡದ ಕಾರ್ಯ ಶ್ಲಾಘನೀಯ ಎಂದರು.

ವಕ್ಫ್ ಬೋರ್ಡ್ ಅಧ್ಯಕ್ಷ ಅನ್ವರ್ ಬಾಷಾ ಮಾತನಾಡಿದರು. ಹುಡಾ ಅಧ್ಯಕ್ಷ ಎಚ್.ಎನ್.ಎಫ್. ಮೊಮ್ಮಹದ್ ಇಮಾಮ್ ನಿಯಾಜಿ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕಾರ್ ಮುಂದಾಳತ್ವದಲ್ಲಿ ಕಾರ್ಮಿಕರು ಸನ್ಮಾನ ಕಾರ್ಯಕ್ರಮ ನಡೆಯಿತು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ www.hampitimes.com/epaper.hampitimes.com ಭೇಟಿ ನೀಡಿ

### ವಿಷಯ : ಕನ್ನಡ (ಪ್ರ.ಭಾ) ಗದ್ಯ– ವ್ಯಾಘ್ರಗೀತೆ

**ಲೇಖಕರ ಪರಿಚಯ: (ಜೂನ್–2022, ಜೂನ್ –2020): ಎ.ಎನ್. ಮೂರ್ತಿ ರಾವ್–** ಶ್ರೀ ಅಕ್ಕಿಹೆಬ್ಬಾಳು ನರಸಿಂಹಮೂರ್ತಿ ರಾವ್ ಅವರು ಕ್ರಿ.ಶ.1900 ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದಲ್ಲಿ ಜನಿಸಿದರು. ಇವರ ಕೃತಿಗಳು ಯಾವುವೆಂದರೆ ದೇವರು, ಹಗಲುಗನಸು, ಅಲೆಯುವ ಮನ, ಅಪರವಯಸ್ಕನ ಅಮೆರಿಕ ಯಾತ್ರೆ, ಚಂಡಮಾರುತ, ಮಿನುಗು ಮಿಂಚು, ಪೂರ್ವ ಸೂರಿಗಳೊಡನೆ ಸಮಗ್ರ ಲಲಿತ ಪ್ರಬಂಧಗಳು ಇನ್ನು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಅ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಭಗವದ್ಗೀತೆಯನ್ನು ರಚಿಸಿದವರು ಯಾರು?**
**ಉತ್ತರ:** ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.

**2. ಹುಲಿಗೆ ಪರಮಾನಂದವಾಗಲು ಕಾರಣವೇನು?**
**ಉತ್ತರ:** ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

**3. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ? (ಮಾರ್ಚ್ –2019)**
**ಉತ್ತರ:** ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.

**4. ಹುಲಿಯನ್ನು ಎದುರಿಸಲು ಶಾನುಭೋಗರಿಗೆ ಯಾವುದು ಬ್ರಹ್ಮಾಸ್ತ್ರವಾಯಿತು? (ಜೂನ್2019)**
**ಉತ್ತರ:** ಹುಲಿಯನ್ನು ಎದುರಿಸಲು ಶಾನುಭೋಗರಿಗೆ ಖಿರ್ದಿ ಪುಸ್ತಕ ಬ್ರಹ್ಮಾಸ್ತ್ರ ವಾಯಿತು.

**5. ಹಸಿದು ಮಲಗಿದ್ದ ಹುಲಿಯೂ ಏನೆಂದು ಯೋಚಿಸಿತು ?**
**ಉತ್ತರ:** ಹಸಿದು ಮಲಗಿದ್ದ ಹುಲಿಯೂ ವಿಧಿ ಆಹಾರಕ್ಕೆ ಏನೆಂದು ಒದಗಿಸುವುದೋ ಎಂದು ಯೋಚಿಸಿತು..

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ. (ಜೂನ್–2022)**
**ಉತ್ತರ:** ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಎತ್ತಿನಗಾಡಿಯಲ್ಲಿ ತಮ್ಮ ಹಳ್ಳಿಗೆ ಹಿಂದುರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿ ಇದೆ ಎನ್ನುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿದವು. ಅದೇ ವೇಳೆಗೆ ಹುಲಿಯ ಗರ್ಜನೆ ಕೇಳಿಸಿತು. ಎತ್ತಿನ ಗಂಟೆಯ ಶಬ್ದ, ರೈತರ ಮಾತನ್ನು ಕೇಳಿದ ಹುಲಿ ಘರ್ಜಿಸಿ ಪಲಾಯನ ಮಾಡಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜನ್ನು ಹೊತ್ತಿಸಿಕೊಂಡು ಬರುತ್ತಿದ್ದಾಗ ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರೆಚಿ ಎಚ್ಚರಿಸುತ್ತಾರೆ.

**2. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?(ಮಾರ್ಚ್–2019)**
**ಉತ್ತರ:** ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿ, ಖಜಾನೆಗೆ ಹಣ ಕಟ್ಟಿ, ವಾಪಸು ಬರುವ ವೇಳೆಗೆ ಸಂಜೆ 6 ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಾಗಿತ್ತು. ಮದಲಿಂಗನ ಕಣಿವೆ ಕಾಡುದಾರಿ ಆದ್ದರಿಂದ" ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಯೋಚಿಸಿ ಬೇಗ ಬೇಗ ನಡೆದರು.

**3. ಹುಲಿ ನಿರಾಶೆಯಿಂದ ಕೋಪಗೊಂಡು ಘರ್ಜಿಸಿ ಏಕೆ ಪಲಾಯನ ಮಾಡಿತು ?(ಮಾರ್ಚ್ 2020)**
**ಉತ್ತರ:** ಹಸಿದ ಹುಲಿ ದುಂಡು ದುಂಡಾದ ಶಾನುಭೋಗರ ಶರೀರವನ್ನು ನೋಡಿ ತಿನ್ನಲು ಹವಣಿಸಿತು ಹುಲಿ ಮತ್ತು ಶಾನುಭೋಗರ ದೊಂಬರಾಟದಲ್ಲಿ ಶಾನುಭೋಗರು ಮೂರ್ಛೆ ಹೋದಾಗ ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಹರ ದಾರಿ ಇದೆ ಎನ್ನುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದ ಕೋಪಗೊಂಡು ಘರ್ಜಿಸಿ ಅಲ್ಲಿಂದ ಪಲಾಯನ ಮಾಡಿತು.

**ಇ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿರಿ.**

**1." ದೇವರೇ, ಮರ ಹತ್ತುವಷ್ಟು ಅವಕಾಶ ಕರುಣಿಸು" (ಮಾರ್ಚ್ –2018)**
**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎ.ಎನ್ .ಮೂರ್ತಿ ರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:** ಸಂಕಟ ಬಂದಾಗ ವೆಂಕಟರಮಣ ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

**2. "ಹುಲಿ ಈಗ ಎಷ್ಟು ಹಸಿದಿರಬೇಕು"**
**ಆಯ್ಕೆ:** ಈ ವಾಕ್ಯವನ್ನು ಎ.ಎನ್. ಮೂರ್ತಿ ರಾವ್ ಬರೆದಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ಧ 'ವ್ಯಾಘ್ರ ಗೀತೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:** ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವು ನಿಂದ ಬಳಲುತ್ತಿರಬಹುದು. ಎಂದು ಶಾನುಭೋಗರು ತಮ್ಮ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾರೆ.

www.hampitimes.com/epaper.hampitimes.com

ಮಾರ್ಗದರ್ಶಿ ಶಿಕ್ಷಕರು : ಮಧು.ಕೆ., ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ), ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055